ಶ್ರೀ

ಶ್ರೀಮತೇ ರಾಮಾನುಜಾಯನಮಃ

# ಸದಾಚಾರ್ಯ ವಿವೇಕ

ಶ್ರೀಮಾನ್ ಎಂ. ಓ. ಎಸ್. ಐಯ್ಯಂಗಾರ್, ಬಿ.ಇ.,ಎಂ.ಐ.ಇ.,
ರಿಟೈರ್ಡ್ ರೈಲ್ವೇ ಡೆಪ್ಯೂಟಿ ಛೀಫ್ ಇಂಜಿನಿಯರಿಂದ
ಬರೆಯಲ್ಪಟ್ಟದ್ದು

ಉಭಯವೇದಾನ್ತ ಪ್ರವರ್ತನ ಸಭೆಯವರಿಂದ
ಪ್ರಕಟಿಸಲ್ಪಟ್ಟಿದ್ದು.

ಮಲ್ಲೇಶ್ವರಂ, ಬೆಂಗಳೂರು.

1968

ಮೊದಲ ಮುದ್ರಣ : 1968

ಮುದ್ರಣ :
ದವಲತ್ ಪ್ರಿಂಟರ್ಸ್,
ಮಲ್ಲೇಶ್ವರಂ, ಬೆಂಗಳೂರು-3.

# ಪ್ರ ಕ ಟ ನೆ

ಉಭಯವೇದಾನ್ತ ಪ್ರವರ್ತನಸಭೆಯು ಸುಮಾರು 60 ವರ್ಷಗಳಿಂದ ಅವಿಚ್ಛಿನ್ನ ವಾಗಿ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಉಪನ್ಯಾಸಗಳ ಮೂಲಕವೂ, ವೇದ ಮತ್ತು ಸಂಸ್ಕೃತ ದ್ರಾವಿಡರೂಪವಾದ ಉಭಯವೇದಾನ್ತಗಳಲ್ಲಿ ಪರೀಕ್ಷೆಗಳನ್ನು ನಡೆಯಿಸಿ ಬಹುಮಾನಗಳನ್ನು ಕೊಡುವುದರ ಮೂಲುವೂ ಪ್ರಚಾರ ಮಾಡುತ್ತಿರುವುದು ಎಲ್ಲರಿಗೂ ತಿಳಿದ ವಿಷಯುವೇ ಆಗಿದೆ ಪುಸ್ತಕ ಭಂಡಾರವನ್ನು ಏರ್ಪಡಿಸಲಾಗಿದೆ. ಮತ್ತು ವಿದಾರ್ಥಿಗಳಿಗಾಗಿ ಪಾಠಶಾಲೆಯನ್ನು ನಡೆಯಿಸಲಾಗಿದೆ.

ಇದರಜೊತೆಗೆ ಸಭೆಯ ಉದ್ದೇಶಗಳಲ್ಲೊಂದಾದ ಲೇಖನ ಪ್ರಕಟನ ಕಾರ್ಯವನ್ನು ಪ್ರಾರಂಭ ಮಾಡಲಾಗಿದೆ. ಲೇಖನಗಳು ಒದಗಿ ಸೌಕರ್ಯಗಳು ಏರ್ಪಟ್ಟರೆ ತ್ರೈಮಾಸಿಕ ಅಥವಾ ಮಾಸಿಕ ಪತ್ರಿಕೆಯನ್ನು ಆರಂಭಿಸಲು ಉದ್ದೇಶ್ಯವಿದೆ. ಪ್ರಕಟನ ಕಾರ್ಯವು ಚಿಕ್ಕ ಚಿಕ್ಕ ಲೇಖನಗಳನ್ನು ಪ್ರಕಟಿಸುವ ಕಾರ್ಯದಿಂದ ಆರಂಭವಾಗಿದೆ. ಶ್ರೀಮಾನ್ ರಿಟೈರ್ಡ್ ಡೆಪ್ಯುಟಿ ಚೀಫ್ ಇಂಜನಿಯರ್, ಸದರ್ನ್ ರೈಲ್ವೆ ಎಂ. ಓ. ಎಸ್. ಐಯ್ಯಂಗಾರ್ಯರು ತಮ್ಮ ಲೇಖನವನ್ನು ಸಭೆಗೆ ಕೊಟ್ಟು ಉಪಕರಿಸಿರುತ್ತಾರೆ. ಇದೇ ರೀತಿ ಆಗಾಗ್ಗೆ ಸರಳವಾದ ಮತ್ತು ವಿದ್ವತ್ಪೂರ್ಣವಾದ ಲೇಖನಗಳನ್ನು ಚಿಕ್ಕ ಪುಸ್ತಕ ಗಳಾಗಿ ಪ್ರಕಟಿಸಿ ಜ್ಞಾನಪ್ರಸಾರ ಕಾರ್ಯವನ್ನು ಮುಂದುವರಿಸಲು ಸಭೆಯು ಆಶಿಸುತ್ತದೆ.

ವಿದ್ವಾಂಸರುಗಳು ತಮ್ಮ ವಿರಾಮ ಕಾಲಗಳಲ್ಲಿ ಈ ವಿಧವಾದ ಗ್ರಂಥಗಳನ್ನು ಬರೆದು ಸಭೆಯ ಪ್ರಕಟನ ಕಾರ್ಯದಲ್ಲಿ ನೆರವಾಗಬೇಕೆಂದು ಪ್ರಾರ್ಥಿಸುತ್ತೇವೆ. ಶ್ರೀಮದಾಚಾರ್ಯವರ್ಯರ ನಿರ್ಹೇತುಕ ಕೃಪಾಕಟಾಕ್ಷದಿಂದ ನಮ್ಮ ಉದ್ದೇಶವು ಶಾಶ್ವತ ವಾಗಿ ಬೆಳೆಯಲೆಂದು ಪ್ರಾರ್ಥಿಸುತ್ತೇವೆ

ಶ್ರೀ ರಾಮಾನುಜಾರ್ಯ ದಿವ್ಯಾಜ್ಞಾ ವರ್ಧತಾಂ ಅಭಿವರ್ಧತಾಂ

2—1—68
ಮಲ್ಲೇಶ್ವರಂ.

ಇತಿ,
**ಗೌರವ ಕಾರ್ಯದರ್ಶಿ.**

# ವಿ ಜ್ಞಾ ಪ ನೆ

ಮುಮುಕ್ಷುಗಳಾದ ಶ್ರೀವೈಷ್ಣವರಿಗೆ ತತ್ತ್ವ, ಹಿತ. ಪುರುಷಾರ್ಥಗಳ ಯಥಾವತ್ ಜ್ಞಾನವು ಅತ್ಯಾವಶ್ಯಕವು. 1964 ನೇ ಸಂವತ್ಸರದಲ್ಲಿ ಈ ಸಭೆಯುವರು ದಾಸನು ಬರೆದ "ಪರತತ್ತ್ವ" ವಿಚಾರವನ್ನು ಅನೇಕರು ಓದಿರಬಹುದು. ಪರತತ್ತ್ವ ಜ್ಞಾನ ವುಂಟಾದಮೇಲೆ ಉಪಾಯ ಮತ್ತು ಪುರುಷಾರ್ಥಗಳ ಸಾಧನೆಗಾಗಿ ಆಚಾರ್ಯಾನು ವರ್ತನವು ನಮ್ಮ ಸಿದ್ಧಾನ್ತಕ್ಕೆ ಅತಿ ಮುಖ್ಯವಾದದ್ದು

"ಪೀತಕವಾಡೈಪ್ಪಿರಾನ್ ಪರಮ ಗುರುವಾಯ್ ಪಿರಂದು" ಎಂದು ನಮ್ಮಾಳ್ವಾರ್ರು ಪರಮಾತ್ಮನೇ ಪ್ರಥಮಾಚಾರ್ಯನಾಗಿ ಅವತರಿಸಿದನು ಎಂದು ಹಾಡಿರುವರು. ಆಚಾರ್ಯಾನುಗ್ರಹವಿಲ್ಲದೆ ಕೈಂಕರ್ಯದೊಡನೆ ಕೂಡಿದ ಸಾಯುಜ್ಯ ಮುಕ್ತಿಯು ಸುಲಭವಾಗಿ ದೊರಕುವುದಿಲ್ಲವೆಂಬುವುದು ಶ್ರೀವೈಷ್ಣವರಾದ ನಮ್ಮ ಸಿದ್ಧಾನ್ತ. ಅಂತಹ ಪರಮಾಚಾರ್ಯ ಸ್ಥಾನವು ಭಗವದ್ರಾಮಾನುಜಾಚಾರ್ಯರಿಗೇ ಇರುವುದು ಎಂಬುವುದನ್ನು ಈ ಸಣ್ಣ ಗ್ರಂಥದಲ್ಲಿ ಕಾಣಿಸಿದೆ. ಅದರ ಜೊತೆಗೆ ಅವರು ಉಪದೇಶಿಸಿದ ಆಚಾರ ನಿಷ್ಠೆಯೂ ಸ್ವಲ್ಪಮಟ್ಟಿಗೆ ತಿಳಿಸಲ್ಪಟ್ಟಿದೆ ಮಹಾಭಾರತವನ್ನು ಒಬ್ಬ ಮಹನೀಯರು ಕೇವಲ ಒಂದು ಶ್ಲೋಕದಿಂದ ಹಾಡಿದರಂತೆ ಅದರಂತೆಯೇ ಮಹತ್ತಾದ ಈ ವಿಷಯವನ್ನು ಅಲ್ಪಶ್ರುತನಾದ ದಾಸನು ಸ್ಥಳಸಂಕೋಚದಿಂದಾಗಿ ಸ್ವಲ್ಪ ಮಟ್ಟಿಗೆ ವಿವರಿಸುವುದಕ್ಕೆ ಪ್ರಯತ್ನಿಸಿರುವೆನು. ಇವರಲ್ಲಿರಬಹುದಾದ ಗುಣಗಳನ್ನು ಮಹನೀಯರು ಗ್ರಹಿಸಿ, ತಪ್ಪುಗಳನ್ನು ಮನ್ನಿಸುವರೆಂದು ನಂಬಿರುವೆನು.

ಉಭಯ ವೇದಾನ್ತ ಪ್ರವರ್ತನ ಸಭೆಯ ವರು ಇದನ್ನು ಪ್ರಚುರ ಪಡಿಸಿದುದಕ್ಕಾಗಿ ಅವರಿಗೆ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸುವೆನು.

ಎಂ. ಓ. ಶ್ರೀನಿವಾಸದಾಸನ್

ಪಿತಾಚ, ರಕ್ಷಕಶ್ಶೇಷೀ, ಭರ್ತಾಜ್ಞೇಯೋ ರಮೂಪತಿಃ।
ಸ್ವಾಮ್ಯಾಧಾರೋ ಮಮಾತ್ಮಾಚ। ಭೋಕ್ತಾಚಾದ್ಯಮನೂದಿತಃ ॥*
(ಅಷ್ಟಾದಶರಹಸ್ಯ–ನವವಿಧ ಸಂಬಂಧ)

ಎಂಬ ಮನುರಾಜ ಪದತ್ರಯೋಕ್ತ ನವವಿಧಸಂಬಂಧ ಜ್ಞಾನಾನುಷ್ಠಾನಗಳು ನಮ್ಮ ಶ್ರೀವೈಷ್ಣವರ ಅಂತಃಕರಣದಲ್ಲಿ ಜನಿಸಬೇಕು. ಇದು ಬಹಳ ತಿಳುವಳಿಕೆಯಿಂದಲೂ ಅಭ್ಯಾಸದಿಂದಲೂ ಸಾಧ್ಯವು "ಪದ್ಮಪುರಾಣದಲ್ಲಿ"

ದ್ವಿವಿಧಂ ವೈಷ್ಣವಂಪ್ರೋಕ್ತಂ। ಬಾಹ್ಯಮಾಭ್ಯಂತರಂ ತಥಾ।
ಶಂಖಚಕ್ರಾದಿಕಂ ಬಾಹ್ಯ। ಮಾಂತರಂ ವೀತರಾಗತಃ ॥

ಎಂದು ಹೇಳಿದೆ "ವೀತರಾಗತ್ವ" ವೆಂದರೆ–ಶ್ರೀಶಾಂಘ್ರಿಸಂಬಂಧ ಜ್ಞಾನಾನುರಾಗಾನ್ವಿತನಾದ ಶ್ರೀವೈಷ್ಣವನಿಗೆ ತದ್ವ್ಯತಿರಿಕ್ತಸ್ವಶರೀರಸಂಬಂಧಿ ಸ್ನೇಹಾದಿಗಳು "ಕ್ಷೇತ್ರಾಣಿ" ಎಂಬ ವಚನದ ಪ್ರಕಾರ ಪ್ರತಿಕೂಲಗಳಾಗಿ ತೋರುವುವು **

*ಪಿತಾಚರಕ್ಷರಕಶ್ಶೇಷೀ ಭರ್ತಾ, ಜ್ಞೇಯೋರಮಾಪತಿಃ।
ಸ್ವಾಮ್ಯಾಧಾರೋಮಮಾತ್ಮಾಚ। ಭೋಕ್ತಾಚಾದ್ಯಮನೂದಿತಃ ॥

'ಓಂನಮೋ, ನಾರಾಯಣಾಯ' ಎಂಬ "ತಿರುಮಂತ್ರ" ದಲ್ಲಿ ಈಶ್ವರನಿಗೂ ಚೇತನಿಗೂ ಇರುವ ಒಂಭತ್ತು ವಿಧವಾದ ಸಂಬಂಧವು ವ್ಯಕ್ತಪಡಿಸಲ್ಪಟ್ಟಿರುವುದು–ಇದರಲ್ಲಿ ಓಂ ಎಂಬುದು ಅ ಕಾರ, ಉ ಕಾರ, ಮ ಕಾರಗಳೆಂಬ ಮೂರು ಅಕ್ಷರಗಳಿಂದ ಕೂಡಿರುವುದು "ಅ" ಕಾರವು "ಪಿತಾ–ಪುತ್ರ" ಸಂಬಂಧದ್ಯೋತಕವು, "ಅವರಕ್ಷಣೇ" ಎಂಬ ಧಾತುವಿನ ಅರ್ಥದಿಂದ 'ರಕ್ಷ್ಯ–ರಕ್ಷಕ" ಸಂಬಂಧವೂ, "ಲುಪ್ತಚತುರ್ಥಿ" ಯಿಂದ "ಶೇಷ–ಶೇಷಿ' ಸಂಬಂಧವೂ, 'ಉ" ಕಾರದಿಂದ ಬರ್ತೃ-ಭಾರ್ಯಾ ಸಂಬಂಧವೂ, "ಮ" ಕಾರದಿಂದ "ಜ್ಞಾತೃ–ಜ್ಞೇಯ' ಸಂಬಂಧವೂ, "ನಮಸ್" ಶಬ್ದದಿಂದ "ಸ್ವ ಸ್ವಾಮಿ" ಸಂಬಂಧವೂ, "ನಾರ" ಪದದಿಂದ "ಶರೀರಿ-ಶರೀರ"–ಸಂಬಂಧವೂ" "ಅಯನ" ಪದದಿಂದ ಆಧಾರಾದೇಯ ಸಂಬಂಧವೂ ಆಯ" ಪದದಿಂದ "ಬೋಕ್ತೃ-ಭೋಗ್ಯ" ಸಂಬಂಧವೂ ಈ ರೀತಿಯಾಗಿ "ತಿರುಮಂತ್ರ" ದಿಂದ ಈಶ್ವರನಿಗೂ ಚೇತನಿಗೂ ಇರುವ ನವವಿಧ ಸಂಬಂಧಗಳು ನಮ್ಮ ಪೂರ್ವಾಚಾರ್ಯರುಗಳಿಂದ ಹೇಳಲ್ಪಟ್ಟಿವೆ ಈ ನವವಿಧ ಸಂಬಂಧಗಳೂ ಮುಮುಕ್ಷುವಿಗೆ ನಿತ್ಯಾನುಸಂಧೇಯಗಳು

ಕ್ಷೇತ್ರಾಣಿ—

**ಪಿತರಂ ಮಾತರಂ ದಾರಾ ಪುತ್ರಾ ಬಂಧೂ ಸಖೀ ಗುರೂನ್॥
ರತ್ನಾನಿಧನಧಾನ್ಯಾನಿ, ಕ್ಷೇತ್ರಾಣಿಚಗೃಹಾಣಿಚ॥
ಸರ್ವಧರ್ಮಾಂಶ್ಚ ಸಂತ್ಯಜ್ಯ, ಸರ್ವಕಾಮಾಂಶ್ಚ ಸಾಕ್ಷರಾ॥
ಲೋಕವಿಕ್ರಾಂತ ಚರಣೌ, ಶರಣಂತೇ ವ್ರಜಂವಿಭೋ॥ (ಗದ್ಯತ್ರಯ ಶರಣಾಗತಿಗದ್ಯ) ಎಂಬಂತೆ ಭಗವಂತನಲ್ಲಿ ಸಂಪೂರ್ಣ ಶರಣಾಗತಿಯನ್ನು ಮಾಡುವವನು. ಪಿತೃ, ಮಾತೃ ದಾರಾ, ಪುತ್ರ ಪುತ್ರಿ, ಬಂಧು, ಸುಖಿ, ಸುಖೀ, ಗುರು, ರತ್ನ, ಧನ, ಧಾನ್ಯ, ಕ್ಷೇತ್ರ, ಗೃಹ, ಆದಾಯ ಇತ್ಯಾ ದಿಗಳನ್ನೆಲ್ಲಾ ಅವುಗಳ ಹಿಂದಿನ ವಾಸನಾಸಂಬಧಗಳೊಂದಿಗೆ ತ್ಯಜಿಸಿ ಧರ್ಮ ಅರ್ಥ, ಕಾಮಗಳನ್ನೂ ತ್ಯಜಿಸಿ ಶರಣಾಗತಿಯನ್ನು ಮಾಡಬೇಕೆಂದು ಹೇಳಿರುವುದು,

ಭಗವಚ್ಚರಣೈಕಪರನಾದ ಶ್ರೀವೈಷ್ಣವನಿಗೆ ತನ್ನ ಈ ಶರೀರವೂ ಮತ್ತು ಶಾರೀರ ಸಂಬಂಧಿಗಳಾದ ಪುತ್ರ, ಕಳತ್ರ, ಕ್ಷೇತ್ರಧನಾದಿಗಳೂ (ಅವು ಸಂಸಾರಹೇತುಗಳಾದ್ದರಿಂದ) ಪ್ರತಿಕೂಲಗಳೆಂದು ನೆನೆದು ಅವುಗಳಾನ್ನೆಲ್ಲಾ ಸವಾಸನೆಯಾಗಿ ತ್ಯಜಿಸಿ, "ಭಗವಚ್ಚರಣಾರವಿಂದಗಳೇ ತನಗೆ ಉತ್ತಾರಕಗಳು" ಎಂಬ ಧೃಡವಾದ ನಂಬಿಕೆಯೇ "ಅಂತಃಕರಣ ಶುದ್ಧಿ"ಯನ್ನುಂಟು ಮಾಡುವುದು ಈ ರೀತಿಯಾದ ಬಾಹ್ಯಾನ್ತಃಕರಣ ಶುದ್ಧಿಗಳು ಶ್ರೀವೈಷ್ಣವಲಕ್ಷಣಗಳೆನಿಸುವುವು.

## ವೈಷವನ ಆಚಾರ ಲಕ್ಷಣಗಳು:—

ತನ್ನಿಷ್ಠವಾದ ಆಚಾರ ಕ್ರಮವೆಂದರೆ.—ವೈಷ್ಣವಲಕ್ಷಣವಾದ–ತಾಪಾದಿಗಳು ಲಭಿಸುವಾಗ

"ತದ್ವಿಜ್ಞಾನಾರ್ಥಂ ಸಗುರುಮೇವಾಭಿಗಚ್ಛೇತ್।
ಪ್ರೋವಾಚತಾಂ ತತ್ವತೋಬ್ರಹ್ಮವಿದ್ಯಾಂ॥ (ಮುಂ. ಉ. 1–2–12, 13)

ಎಂಬ ಶ್ರುತಿ ವಾಕ್ಯರೀತ್ಯಾ, ಒಬ್ಬ ಸದ್ಗುರು ಸಮಾಶ್ರಯಣವನ್ನು ಮಾಡಿ ಅವನನ್ನು ಅನುಸರಿಸಿ ತದ್ಗುರೂಪದೇಶದ ಮೂಲಕ ಬ್ರಹ್ಮಜ್ಞಾನವನ್ನು ಪಡೆಯಬೇಕು. ಈ ಸದ್ಗುರುವಿನ ಮೂಲಕವಾಗಿಯೇ ಜಗತ್ಕಾರಣನಾಗಿಯೂ, ಅಖಿಲಹೇಯ ಪ್ರತ್ಯನೀಕನಾಗಿಯೂ, ಸಕಲ ಕಲ್ಯಾಣ ಗುಣಪೂರ್ಣನಾಗಿಯೂ, ಪರಮ ಕಾರುಣಿಕನಾಗಿಯೂ ಇರುವ ಶ್ರೀಮನ್ನಾರಾಯಣನನ್ನು ಉಪಾಸಿಸುವವರಿಗೆ ನಿರತಿಶಯವಾದ ಮೋಕ್ಷ ಸಾಮ್ರಾಜ್ಯವೂ ಮಹದೈಶ್ವರ್ಯವಾದ ಆತನ ಕೈಂಕರ್ಯವೂ ಅವನ ವಿಶೇಷ ಕಟಾಕ್ಷ ರೂಪವಾಗಿ ಲಭಿಸುವುದು. ಆದ್ದರಿಂದ, ಅಂತಹ ಭಗವದ್ಭಕ್ತನಾದ ಸದ್ಗುರುವನ್ನು ಆಶ್ರಯಿಸಿ ಉಜ್ಜೀವಿಸಬೇಕೆಂಬುದೇ ಸರ್ವ ಶ್ರೀವೈಷ್ಣವರ ಕರ್ತವ್ಯವು.

"ಆಚಾರ್ಯಸ್ತುಹರಿಃ ಸಾಕ್ಷಾತ್, ಚರರೂಪೀನಸಂಶಯಃ"

ಎಂದೂ "ಗುರುರೇವಪರಂಬ್ರಹ್ಮ, ಗುರುರೇವಪರಾಗತಿಃ, ಗುರುರೇವಪರಾ ವಿದ್ಯಾ, ಗುರುರೇವಪರಂ–ಧನ" ಎಂದು ಆರಂಭಿಸಿ

ಅರ್ಚನಿಯಶ್ಚವಂದ್ಯಶ್ಚ ಪ್ತೂ ಜನೀಯಶ್ಚಸರ್ವದಾ।
ಧ್ಯಾಯೇಜ್ಜಪೇನ್ನಮೇದ್ಭಕ್ತ್ಯಾ। ಭಜೇದಭ್ಯರ್ಚಯೇನ್ಮುದಾ॥

ಇತ್ಯಾದಿ ಶಾಸ್ತ್ರವಚನ ರೀತ್ಯಾ, ವಿಶೇಷ ಪ್ರತಿ ಪತ್ತಿಯೊಡನೆ ತತ್ಸಮಾಶ್ರಯಣವನ್ನು ಮಾಡಿ, ತಚ್ಚರಣೈಕ ಶರಣನಾಗಿ, ತನ್ಮುಖೋಲ್ಲಾಸಾರ್ಥವಾಗಿ ಭಗವದ್ಭಾಗವತ ಕೈಂಕರ್ಯದಲ್ಲಿಯೂ, ಭಗವದ್ಭಾಗವತ ಮುಖೋಲ್ಲಾಸಾರ್ಥವಾಗಿ ಸ್ವಾಚಾರ್ಯ ಕೈಂಕರ್ಯದಲ್ಲಿಯೂ, ನಿರತನಾಗಿ ತಲ್ಲಬ್ಧ ಸಕಲ ಶ್ರುತಿಸ್ಮೃತ್ಯಾದಿ ಸಚ್ಛಾಸ್ತ್ರ

ಸಮನ್ವಿತ ರಹಸ್ಯತ್ರಯವಾದ ಪ್ರಪತ್ತಿ ವೈಭವಜ್ಞನಾಗಿ ತದನುಸಾರವಾಗಿ ತನ್ನ ಆಚಾರದಲ್ಲಿ ನಿಷ್ಠನಾಗಿರಬೇಕು.

ಈ ರೀತಿಯಾಗಿ ಸಕಲೋಪಾಯ ಶ್ರೇಷ್ಠವಾದ ಈ ಪ್ರಪತ್ತಿಯೇ ಮೇಲೆ ಹೇಳಿದ "ವೈಷ್ಣವಾಚಾರಸೇವನಾತ್" (ಪಾಂಚರಾತ್ರ) ಎಂಬ ಶಬ್ದದ ಮುಖ್ಯಾರ್ಥವು ಆದರೆ ಸಾಧಾರಣವಾದ "ಆಚಾರ" ಶಬ್ದವು ಆ ಆಚಾರವಿಶೇಷವಾದ "ಪ್ರಪತ್ತಿ"ಯನ್ನು ಭೋಧಿಸುತ್ತದೆಯೇ ? ಎಂದು ಕೇಳಬಹುದು. ಅದಕ್ಕೂ ಶಾಸ್ತ್ರ ಪ್ರಮಾಣ ವುಂಟು. 'ತಸ್ಮಾನ್ನ್ಯಾಸಮೇಷಾಂ ತಪಸಾಮತಿರಿಕ್ತ ಮಾಹುಃ (ತೈ. ನಾಂ 51) "ಮುಕ್ಷುರ್ವೈ ಶರಣಮಹಂ ಪ್ರಪದ್ಯೇ" ಇತ್ಯಾದಿ ಶ್ರುತಿವಾಕ್ಯರೀತ್ಯಾ ನ್ಯಾಸರೂಪವಾದ ಪ್ರಪತ್ತಿಯೇ ಶ್ರೇಷ್ಠವಾದ ತಪಸ್ಸೆಂದು ಹೇಳಿರುವುದರಿಂದಲೂ. "ಮತ್ಸಾಯುಜ್ಯಂಚ ಸರ್ವೇಷಾಂ, ವೈಷ್ಣವಾಚಾರಸೇವನಾತ್" ಎಂಬ ವಾಕ್ಯಕ್ಕೆ ಸಾಯುಜ್ಯ ಫಲಪ್ರದ ವಾದ "ಆಚಾರ" ಶಬ್ದಕ್ಕೆ ವಿಶೇಷವಾಗಿ "ಪ್ರಪತ್ತಿ" ಎಂದೇ ಅರ್ಥ ಮಾಡಬೇಕಾಗುತ್ತದೆ. ತಪಸ್ಸುಗಳಲ್ಲೆಲ್ಲಾ "ಪ್ರಪತ್ತಿ ಯೇ ಶ್ರೇಷ್ಠವಾದ ತಪಸ್ಸು ಎಂಬುದಕ್ಕೆ ಈ ಕೆಳಗೆ ಹೇಳಿರುವ ಭಾರದ್ವಾಜ–ಮಹರ್ಷಿಗಳ ವಚನವೂ ಪ್ರಮಾಣವಾಗಿದೆ

ನಪ್ರಪತ್ತೇಃ ಪರಾವಿದ್ಯಾ ।
ನವಿಷ್ಣೋಃ ದೈವತಂಪರಂ ॥ (ಇತಿ ಭಾರದ್ವಾಜಃ)

**ಪ್ರಪತ್ತಿಯೇ ಸ್ವರೂಪಾನುರೂಪವಾದ ತಪಸ್ಸು** —ಇದೂ ಅಲ್ಲದೆ ಮಹಾತ್ಮರುಗಳಾಗಿಯೂ, ಸದ್ವಿದ್ಯೋನ್ಮುಖರಾಗಿಯೂ ಇರುವ ಮುಮುಕ್ಷುಗಳಿಗೆ ತುರ್ಯೋಪಾಯವಾದ "ಪ್ರಪತ್ತಿ" ಯೇ ಸ್ವರೂಪಾನುರೂಪವೆಂದೂ. ಬೇರೆ ಇತರ ಉಪಾಯಗಳು ಆತ್ಮಸ್ವರೂಪಕ್ಕೆ ವಿರುದ್ಧವೆಂದೂ "ಹಾರೀತಾದಿ" ಸ್ಮೃತಿಗಳು ಹೇಳುತ್ತವೆ, "ಪ್ರಪತ್ತಿ," ಎಂದರೆ "ಶರಣಾಗತಿರೂಪವಾದ ಎಂದರೆ– "ಆತ್ಮಸಮರ್ಪಣಾರೂಪವಾದ ತಪಸ್ಸು," ಭಗವಂತನಲ್ಲಿ ಆತ್ಮಸಮರ್ಪಣೆಯನ್ನು ಮಾಡುವವನು ತನ್ನ ಇಹಪರ ಸಾಧನವಾದ ಸರ್ವಸ್ವವನ್ನೂ ಭಗವದಧೀನಮಾಡಿ, ಕೇವಲ ಭಗವತ್ಪರತಂತ್ರನಾಗಿ, ಭಗವಂತನ ಕೇವಲ ನಿರ್ಹೇತುಕ ಕೃಪಾಕಟಾಕ್ಷವೇ ತನಗೆ ಉತ್ತಾರಕವೆಂದು ಭಾವಿಸಿ, ಇಹಪರ ಸೌಖ್ಯಗಳಿಗಾಗಿ ತಾನು ಮಾಡುವ ಸ್ವಪ್ರಯತ್ನಗಳಲ್ಲಿಯೂ ಭರವಸೆಯನ್ನಿಡದೆ, ನಿಶ್ಚಿಂತನಾಗಿ ಭಗವದ್ಭಾಗವತ ಕೈಂಕರ್ಯ ಗಳಲ್ಲಿ ಸದಾ ನಿರತನಾಗಿರುವನು. "ಸರ್ವಶೇಷಿ" ಯಾದ ಭಗವಂತನಿಗೆ ಸರ್ವವಿಧ ದಲ್ಲಿಯೂ ಶೇಷನಾದ ಜೀವನ ಸಹಜವಾದ ಆತ್ಮಸ್ವರೂಪಕ್ಕೆ ಈ "ಪ್ರಪತ್ತಿ"ಯು ಸ್ವರೂಪಾನು ರೂಪವೆಂದು ಇದರಿಂದ ವ್ಯಕ್ತವಾಗುವುದು. ಇತರ ಉಪಾಯ ಗಳಾದ ಕರ್ಮ, ಭಕ್ತಿ, ಜ್ಞಾನಮಾರ್ಗಗಳಲ್ಲಿ "ತಾನು ಮಾಡುವ ಕರ್ಮಗಳಿಂದ ಭಗವಂತನನ್ನು ತಾನು ಸಂತೋಷಪಡಿಸುವೆನು" ಎಂಬ ಜ್ಞಾನವು ಯಾವಾಗ್ಯೂ

ಚೇತನನಲ್ಲಿ ಬೇರೂರಿರುವುದು. ಆನಂದಸ್ವರೂಪನಾದ ಪರಬ್ರಹ್ಮನಿಗೆ ಯಾವಾಗ್ಯೂ ಅಖಂಡವಾದ ಸಂತೋಷವಿರುವುದರಿಂದ ಚೇತನನು ಅದನ್ನು ಹೆಚ್ಚಿಸಲಾರನು ಚೇತನನು ತನ್ನ ಸ್ವರೂಪಾನು ರೂಪವಾದ ಕರ್ಮವನ್ನು ಕೇವಲ ಕೈಂಕರ್ಯ ಭಾವ ದಿಂದ ಮಾಡಿದರೆ, ಇವನ ನಡತೆಯಿಂದ ಭಗವಂತನು ಅವನಲ್ಲಿ ಸುಪ್ರೀತನಾಗು ವನು ಈ ಶೇಷತ್ವಭಾವವೇ "ಪ್ರಪತ್ತಿಯ ಅಡಿಗಲ್ಲು" ಭಗವತ್ಕೈಂಕರ್ಯ ರೂಪ ವಾಗಿ ಮಾಡುವ ಕಾರ್ಯಗಳೇ ಅದರ ಅನುಷ್ಠಾನವು ಹಾರೀತಾದಿಸ್ಮೃತಿಗಳಲ್ಲಿ ಹೀಗೆ ಹೇಳಿರುತ್ತದೆ

ಚತುರ್ಭಿಶ್ಚೋಭನೋಪಾಯೈಃ। ಸ್ಸಾಧ್ಯಂಸ್ಯಾದ್ಯನ್ಮಹಾತ್ಮಭಿಃ।
ತುರ್ಯ್ಯಯಾವರಯಾಭಕ್ತ್ಯಾ । ಸುಸಿದ್ಧಂಸಮುದಾಹೃತಂ ॥
ತತ್ಸಿದ್ಧ್ಯೇಕುರ್ವನ್ತಿ ವಿದ್ವಾಂಸಃ । ಸ್ವಸ್ವರೂಪತಯಾಸದಾ॥ ಎಂದೂ
ಪೂರ್ವೋತ್ತ್ರಯ ಉಪಾಯಾಸ್ತೇ। ಭವೇಯುರವುನೋಹರಾಃ॥

ಇತ್ಯಾದಿ ಪ್ರಮಾಣ ಪ್ರಸಿದ್ಧಿಯಿಂದ "ಪ್ರಪತ್ತಿಯು" ಸರ್ವೋಪಾಯ ಶ್ರೇಷ್ಠವಾಗು ವುದರಲ್ಲಿ ಯಾವ ಅಭ್ಯಂತರವು ಇಲ್ಲ

"ಪ್ರಪತ್ತಿ" ಯು ಪ್ರೀತಿರೂಪವಾದುದ್ದಾಗಿಯೂ ಇರುವುದರಿಂದ ಅದನ್ನು 'ಭಕ್ತಿ' ಶಬ್ದದಿಂದಲೂ ಕರೆಯಬಹುದು. ಅದೂ ಅಲ್ಲದೆ ಭಕ್ತಿಯು ಪರಭಕ್ತಿ ಸ್ವರೂಪವನ್ನು ಹೊಂದಿದಾಗ ಅದು ಪ್ರಪತ್ತಿರೂಪವಾದುದ್ದಾಗುತ್ತದೆ. ಸಾಲೋ ಕ್ಯಾದಿ ನಾಲ್ಕು ವಿಧವಾದ ಮೋಕ್ಷ ದೆಸೆಗಳಲ್ಲಿ, ಸಾಯುಜ್ಯವು ಶ್ರೇಷ್ಠವಾದಂತೆ ಕರ್ಮಜ್ಞಾನ ಭಕ್ತಿ ಪ್ರಪತ್ತಿಗಳೆಂಬ ಉಪಾಯ ಚತುಷ್ಟಯಗಳಲ್ಲಿ ಪ್ರಪತ್ತಿಯೇ ಶ್ರೇಷ್ಠವಾದುದ್ದೆಂದು ಮೇಲೆ ವಿವರಿಸಲ್ಪಟ್ಟಿದೆ ಎಂದು ತಿಳಿಯ ತಕ್ಕದ್ದು. ಆದ್ದರಿಂದ "ಸಾಯುಜ್ಯಂ ಪ್ರತಿಪನ್ನಾಯೇ, ತೀವ್ರಭಕ್ತಿಸ್ತಪಸ್ವಿನಃ" ಎಂಬುವುದು ದ್ವಯೈಕನಿಷ್ಠರಾಗಿ, ಶ್ರೀವೈಷ್ಣವ ಪ್ರಪನ್ನ ಏಕಾಂತಿ ಪರಮೈಕಾನ್ತಿಗಳಾದ ಭಕ್ತರಲ್ಲಿ ಶಾಸ್ತ್ರರೀತ್ಯಾ ನೆಲೆಸಿರುವುದರಿಂದ "ಮತ್ಸಾಯುಜ್ಯಂಚಸರ್ವೇಷಾಂ, ವೈಷ್ಣವಾ ಚಾರ ಸೇವನಾತ್" ಎಂಬ ವಚನೋಕ್ತಾಚಾರಶಬ್ದಕ್ಕೆ "ಪ್ರಪತ್ತಿ" ಯೇ ಮುಖ್ಯವಾದ ಅರ್ಥವೆಂದು ನಾವು ತಿಳಿಯಬೇಕು.

**ವೈಷ್ಣವಾಚಾರ ನಿಷ್ಕರ್ಷೆಯ ಲಕ್ಷಣವು:**—"ವೈಷ್ಣವಾಚಾರ ನಿಷ್ಕರ್ಷೆ" ಎಂಬುವುದರಲ್ಲಿ "ವೈಷ್ಣವ" ಮತ್ತು "ಆಚಾರ"ಗಳ ವಿಷಯಗಳು ಮೇಲೆ ಹೇಳಲ್ಪಟ್ಟವು ಇನ್ನು "ನಿಷ್ಕರ್ಷ" ಎಂಬ ಪದದ ಅರ್ಥವು ವಿವರಿಸಲ್ಪಡುವುದು ಈ "ನಿಷ್ಕರ್ಷೆಯು" ಆಚಾರದ ಅಂತಿಮಾವಧಿಯನ್ನು ಪ್ರತಿಪಾದಿಸುತ್ತದೆ. "ವೈಷ್ಣವಾಚಾರ ಸೇವನಾತ್" ಎಂಬ ಪ್ರಪತ್ಯನುಷ್ಠಾನವು ಫಲಿಸುವಾಗ, ಅದು

ಶ್ರೀಮತೇ ರಾಮಾನುಜಾಯನಮಃ

# ಸ ದಾ ಚಾ ರ್ಯ ವಿ ವೇ ಕ

## ಒಂದನೆ ಅಧ್ಯಾಯ

ಮೋಕ್ಷಸಾಧನಕ್ಕೆ ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗ ಮತ್ತು ಪ್ರಪತ್ತಿ (ಎಂದರೆ-ಶರಣಾಗತಿ) ಯೋಗಗಳೆಂಬ ನಾಲ್ಕು ಸಾಧನಗಳಿಂದ ಭಗವಂತನನ್ನು ಆರಾಧಿಸುವುದು ವೇದಾನ್ತ–ಶ್ರುತೀತಿಹಾಸ–ಪುರಾಣಾದಿಗಳಲ್ಲಿ ಹೇಳಲ್ಪಟ್ಟ ಉಪಾಯಗಳಾಗಿವೆ ನಾವು ಮಾಡುವ ಆರಾಧನೆಗಳಿಂದ ಭಗವಂತನು ಸುಪ್ರೀತನಾಗಿ, ಉತ್ತರೋತ್ತರ ಶ್ರೇಯಸ್ಸನ್ನು ನಮಗೆ ಕರುಣಿಸುವನು ಆದರೆ ಪ್ರತಿ ಜೀವನೂ ತಾನು ತನ್ನ ಹಿಂದಿನ ಅನಂತಾನಂತ ಜನ್ಮಗಳಲ್ಲಿ ಮಾಡಿರುವ ಪಾಪರಾಶಿಗಳೇ ಅವನ ಶ್ರೇಯಸ್ಸಿಗೆ ವಿಘ್ನಕಾರಿಗಳಾಗಿರುವುವು ಸರ್ವಜ್ಞನಾದ ಪರಮಾತ್ಮನ ಮುಂದೆ ನಾವು ನಿಲ್ಲುವಾಗ, ಆ ಪಾಪರಾಶಿಗಳೆಲ್ಲಾ ಮೂರ್ತಿಮತ್ತಾಗಿ ಅವನಿಗೆ ಕಂಡುಬಂದು ಪಾಪಪುಣ್ಯಗಳಿಗೆ ನ್ಯಾಯಾಧೀಶ ಸ್ಥಾನದಲ್ಲಿ ಇರುವ ಆತನಿಗೆ ನಮ್ಮ ಪಾಪಗಳ ಮಹತ್ವದಿಂದ ಅನುಗ್ರಹ ಬುದ್ಧಿಯು ಹುಟ್ಟುವುದೇ ಕಷ್ಟವಾಗುವುದು. ಪರಮ ಕಾರುಣಿಕ ನೆಂಬ ಬಿರುದನ್ನು ಪಡೆದಿದ್ದರೂ ನ್ಯಾಯಾಧೀಶ ಸ್ಥಾನದಲ್ಲಿರುವುದರಿಂದ ಸರ್ವಜ್ಞನಾದ ಪರಮಾತ್ಮನು ನಮ್ಮ ಪಾಪರಾಶಿಗಳ ಹೆಚ್ಚಿಗೆಯಿಂದ ವಿಶೇಷಾನುಗ್ರಹ ವನ್ನು ತಾನು ತೋರಿಸಲು ಕಷ್ಟಪಡುವನು, ಅದೂ ಅಲ್ಲದೆ ಅಜ್ಞರೂ ಅಲ್ಪಜ್ಞರೂ ಆದ ನಾವು ಈ ಕರ್ಮ, ಜ್ಞಾನ ಭಕ್ತಿ ಪ್ರಪತ್ತಿಗಳನ್ನು ಸರಿಯಾಗಿ ಅನುಷ್ಠಿಸಲೂ ಅರಿಯೆವು ಇಂತಹ ಸಂದರ್ಭದಲ್ಲಿ ಜೀವಾತ್ಮರುಗಳ ಗತಿಯೇನು ? ಕರ್ಮ–ಜ್ಞಾನ ಭಕ್ತಿಪ್ರಪತ್ತಿಗಳನ್ನು ಸರಿಯಾಗಿ ಅನುಷ್ಠಿಸಲು ಅಶಕ್ತರಾದವರಿಗೆ "ಆಚಾರ್ಯಾನುಗ್ರಹ" ವೆಂಬ ಪಂಚಮೋಪಾಯವು ವೈದಿಕ ಸಂಪ್ರದಾಯ ಪ್ರತಿಪಾದ್ಯವಾಗಿ, ಭಗವಂತ ನಿಂದ ಅನುಗ್ರಹಿಸಲ್ಪಟ್ಟ ಸುಲಭೋಪಾಯವಾಗಿದೆ ಅತ್ಯನ್ತ ಭಗವನ್ನಿಷ್ಠ ನಾದ ಒಬ್ಬ ಭಗವದ್ಭಕ್ತನನ್ನು ತನಗೆ ಆಚಾರ್ಯನನ್ನಾಗಿ ಸ್ವೀಕರಿಸಿ, ಅವನ ಸೇವೆಯಲ್ಲಿ ನಿರತನಾಗಿ, ತನ್ನ ಮೋಕ್ಷಸಾಧನಕ್ಕೆ ಕೇವಲ ಅವನ ಅನುಗ್ರಹವೇ ಉತ್ತಾರಕ ವೆಂದು ತಿಳಿದು, ತನ್ನ ಸರ್ವಸ್ವವನ್ನೂ ಅವನ ಅಧೀನಮಾಡಿ, ಅವನ ಅನುಗ್ರಹಕ್ಕೆ ಪಾತ್ರನಾಗುವುದೇ ಈ ಪಂಚಮೋಪಾಯ ವೆಂದು ಕರೆಯಲ್ಪಡುವ ಆಚಾರ್ಯನಿಷ್ಠೆ ಯು ಎಲ್ಲಾ ಮತಗಳಲ್ಲಿಯೂ ಈ ಸಂಪ್ರದಾಯವು ಪ್ರತಿಪಾದಿಸಲ್ಪಟ್ಟಿದೆ, ಶ್ರೀವೈಷ್ಣವಮತದ "ಸದಾಚಾರ್ಯನಿಷ್ಠೆಯು' –ಇಲ್ಲಿ ಈಗ ವಿವರಿಸಲ್ಪಡುವುದು

ಈ ಲೀಲಾವಿಭೂತಿಯು "ಇರುಳ್‌ತರುಮಾಞ್ಞಾಲಂ"–ಎಂದರೆ–ಅಖಂಡ ಅಜ್ಞಾನಾವೃತ ವಾದ ದೇಶವಾದ್ದರಿಂದ "ಈಶ್ವರೋಽಹಮಹಂಭೋಗೀ ಸಿದ್ಧೋಽಹಂ ಬಲವಾನ್ ಸುಖೀ, ಆಡ್ಯೋಽಭಿಜನವಾನಸ್ಮಿ ಕೋನ್ಯೋಽಸ್ತಿ ಸದೃಶೋಮಯಾ" (ಗೀ 16–14) ಎಂದು ಶ್ರೀ ಕೃಷ್ಣನು ಭಗವದ್ಗೀತೆಯಲ್ಲಿ ಹೇಳಿದಂತೆ–ದೇವರೇ ಇಲ್ಲವೆಂದು ವಾದಿಸುತ್ತಾ, ಅವನ ಸ್ವತ್ತಾದ ತನ್ನ ಆತ್ಮವನ್ನು "ಕಿಂತೇನನಕೃತಂಪಾಪಂ, ಚೋರೇಣಾತ್ಮಾಪಹಾರಿಣಾ (ಭಾರ ಉದ್ಯೋ, 40) ಎಂಬಂತೆ ತನ್ನದೆಂದು ಭಾವಿಸುವುದರಿಂದ ಆತ್ಮಾಪಹಾರವನ್ನು ಮಾಡಿಯೂ, ದೇವತಾಂತರಗಳಲ್ಲಿ ಪರತ್ವ-ಬುದ್ಧಿಯನ್ನು ಮಾಡಿಯೂ ಕಿಂಚಿತ್ "ಭಗವತ್–ಶೇಷತ್ವ" ಜ್ಞಾನವುಂಟಾದರೂ, ಅದು ಅಸತ್ಪಾತ್ರವಾಗುವಂತೆ ವರ್ಣಾಶ್ರಮಾಭಿಜನ ವಿದ್ಯಾದಿ ವೃತ್ತಗಳಿಂದುಂಟಾಗುವ ದುರಹಂಕಾರಗಳಿಂದ, ಅತ್ಯಂತ ಅಜ್ಞರಾಗಿ, ಅದರಿಂದ ಭಾಗವತಾಪಚಾರ ರೂಪವಾದ ಮಹಾಪಾತಕವನ್ನು ಮಾಡಿ ಆಧ್ಯಾತ್ಮಿಕಾದಿ ತಾಪತ್ರಯಜನಿತ ದಾವಾನಲದಗ್ಧರಾಗಿ, ವಿತ್ತೇಷಣ, ದಾರೇಷಣ ಪುತ್ರೇಷಣಾದಿಗಳಾದ ಅಂಧಕಾರ ರೂಪವಾದ ಪ್ರವಾಹದಲ್ಲಿ ಮುಳುಗಿ, ತತ್ಪುಣ್ಯಪಾಪಾನುರೂಪವಾದ ಸ್ವರ್ಗನರಕಾದಿಗಳನ್ನು ಅನುಭವಿಸುತ್ತಾ, ಜನನ ಮರಣಾದಿ ಅನಂತಕ್ಲೇಶಭಾಜನ ರೂಪವಾದ ಸಂಸಾರ-ಚಕ್ರದಲ್ಲಿ ಕೊನೆಮೊದಲಿಲ್ಲದೆ ತೊಳಲುತ್ತಾ, ಸ್ವಶರೀರಾನುಗುಣಗಳಾದ ಲಾಭನಷ್ಟಗಳನ್ನೇ ತಮಗೆ ಒದಗುವ ಸಂತೋಷ–ದುಃಖಗಳೆಂಬುದಾಗಿ ತಿಳಿಯುತ್ತಾ ತೊಳಲುತ್ತಿರುವ ನಿತ್ಯಸಂಸಾರಿಗಳ ವಾಸಸ್ಥಾನವಾಗಿರುತ್ತದೆ.

ಈ ರೀತಿಯಲ್ಲಿ ತೊಳಲುತ್ತಿರುವ ನಿತ್ಯಸಂಸಾರಿಗಳಲ್ಲಿ ಕೆಲವರಿಗೆ ಭಗವನ್ನಿರ್ಹೇತುಕ ಕಟಾಕ್ಷವಿಶೇಷದಿಂದ "ಏವಂಸಂಸೃತಿಚಕ್ರಸ್ಥೇ ಭ್ರಾಮ್ಯಮಾಣೇ ಸ್ವಕರ್ಮಭಿಃ ಜೀವೇದುಃಖಾಕುಲೇ ವಿಷ್ಣೋಃ ಕೃಪಾಕಾಪ್ಯುಪಜಾಯತೇ (ಅಹಿರ್ಬುಧ್ನ್ಯಸಂಹಿತೆ)

"ಜಾಯಮಾನಂಹಿಪುರುಷಂ, ಯಂ ಪಶ್ಯೇನ್ಮಧುಸೂಧನಃ।
ಸಾತ್ವಿಕಸ್ಸತು ವಿಜ್ಞೇಯಃ ಸವೈಮೋಕ್ಷಾರ್ಥಚಿಂತಕಃ॥

(ಭಾರ–ಮೋಕ್ಷಧರ್ಮ 349–72) ಎಂಬ ಶಾಸ್ತ್ರವಚನ ರೀತ್ಯಾ ಜನನ ಕಾಲದಲ್ಲಿ ಶ್ರೀ ಮ ನ್ನಾ ರಾ ಯ ಣ ನ ಜಾಯಮಾನ-ಕಟಾಕ್ಷವುಂಟಾಗಿ, ಅದರ ಫಲವಾಗಿ ಆ ಜನ್ಮದಲ್ಲಿ ಆ ಜೀವನಲ್ಲಿ ಸತ್ತ್ವ ಗುಣವು ತಲೆದೋರಿ, ಭಗವಂತನಲ್ಲಿ ಭಕ್ತಿಯೂ ಮೋಕ್ಷಾಪೇಕ್ಷೆಯೂ ಉಂಟಾಗುವುವು. ಆಗ ಭಗವಂತನ ಈ ಕೃಪಾ ಕಟಾಕ್ಷ ವಿಶೇಷದಿಂದ ಶ್ರೇಷ್ಠವಾದ ಬ್ರಾಹ್ಮಣವರ್ಣದಲ್ಲಿ, ಅದರಲ್ಲಿಯೂ ಶ್ರೀವೈಷ್ಣವ ವರ್ಣದಲ್ಲಿ, ಸದಾಚಾರಸಂಪನ್ನರಾದ ಪರಮಾಚಾರ್ಯ ಸಮಾಶ್ರಯಣೀಯರಾದ ಶ್ರೀವೈಷ್ಣವಾಚಾರ–ತತ್ಪರರಾದವರ ಸತ್ಕುಲದಲ್ಲಿ ಜನಿಸುವನು. ಈ ರೀತಿಯಾಗಿ

ಪಡೆದ ಜನ್ಮವನ್ನು ಸಾರ್ಥಕಪಡಿಸಿಕೊಳ್ಳುವುದು ಅವರವರ ವಿವೇಕಜ್ಞಾನದಿಂದುಂ ಟಾಗುವ ಸತ್ಸಂಪ್ರದಾಯ ಪರಂಪರಾನುಕ್ರಮವಾದ ಆಚಾರನಿಷ್ಠಾಕ್ರಮವನ್ನು ಅನುಸರಿಸುವುದರಲ್ಲಿರುವುದು.

ವರ್ಣಾಶ್ರಮ ಧರ್ಮಾನುಷ್ಠಾನ ತತ್ಪರರಾದ ನಮಗೆಲ್ಲಾ "ಶ್ರುತಿಸ್ಮೃತೀಮಮೈ ವಾಜ್ಞೇ" ಎಂದೂ "ಶ್ರುತಿಸ್ಮೃತಿರುಭೇನೆತ್ರೇ, ಪುರಾಣಂ ಹೃದಯಂಸ್ಮೃತಂ" ಎಂಬ ಶಾಸ್ತ್ರವಚನ ಪ್ರಕಾರ ಭಗವಂತನ ಆಜ್ಞಾರೂಪ ವಾದ ಶ್ರುತಿಸ್ಮೃತಿ ಗಳು ನಮಗೆ ಎರಡು ಜ್ಞಾನ ಚಕ್ಷುಸ್ಸುಗಳಂತೆಯೂ, ಅವುಗಳಲ್ಲಿರುವ ವಿಷಯವು ಹೃದ್ಗತವಾಗಬೇಕಾದರೆ ಇತಿಹಾಸ ಪುರಾಣಾದಿಗಳಿಂದ ಅವುಗಳನ್ನು ತಿಳಿದು ಅನುಷ್ಠಾನದಲ್ಲಿ ಅನುಸರಿಸಬೇಕೆಂದೂ ವ್ಯಕ್ತವಾಗುವುದು.

ವಿಶಿಷ್ಟಾತ್ಮಸ್ವರೂಪ ಧರ್ಮಬೋಧಕವಾದ "ವರ್ಣಾಶ್ರಮಾಚಾರವು" ಮೇಲೆ ಹೇಳಿದಂತೆ ಭಗವದಾಜ್ಞಾ ಕೈಂಕರ್ಯ ರೂಪೇಣ ಅವಶ್ಯವಾಗಿ ಅನುಷ್ಠೇಯವಾಗುವುದರ ಜೊತೆಗೆ ನಿಷ್ಕೃಷ್ಟಾತ್ಮಸ್ವರೂಪವಾದ ಶ್ರೀವೈಷ್ಣವಾಚಾರವು (ನಿಷ್ಕರ್ಷೆಯು) ವರ್ಣಾಶ್ರಮಾಚಾರ–ಪ್ರಧಾನರಾದ ಮುಮುಕ್ಷುಗಳಾಗಿರುವ ಶ್ರೀವೈಷ್ಣವರಿಗೆಲ್ಲಾ ಅನುಷ್ಠೇಯವೆಂದು ಅರಿಯಬೇಕು. "ವಿಶಿಷ್ಟಾತ್ಮಸ್ವರೂಪವೆಂದರೆ–ವರ್ಣಾಶ್ರಮ ಧರ್ಮಾನುಸಾರಿಗಳಾದ ಚತುರ್ವರ್ಣದ ಜನರಿಗೆ ಅನುಷ್ಠೇಯವಾದ ಶಿಷ್ಟಾಚಾರ ವೆಂದು ಗ್ರಹಿಸಬೇಕು. ವರ್ಣಾಶ್ರಮ ಧರ್ಮವು ಚತುರ್ವರ್ಣದರಿಗೆಲ್ಲಾ ಅವಶ್ಯ ವಾಗಿ ಅನುಷ್ಠಿಸಬೇಕಾದ ಆಚಾರವು. ನಿಷ್ಕೃಷ್ಟಾತ್ಮಸ್ವರೂಪವಾದ ಶ್ರೀವೈಷ್ಣವಾ ಚಾರ (ನಿಷ್ಕರ್ಷೆ)" ಎಂದರೆ–ಮುಮುಕ್ಷುಗಳಾದ ಶ್ರೀವೈಷ್ಣವರಿಂದಲೇ ಅನುಷ್ಠೇಯ ಗಳಾದ ಹೀಗೆಯೇ ಎಂದು ಶಾಸ್ತ್ರ ಮತ್ತು ಪರಂಪರಾನುಕ್ರಮವಾಗಿ ಆಚಾರ್ಯೋ ಪದೇಶಗಳಿಂದ ನಿಷ್ಕರ್ಷಿಸಲ್ಪಟ್ಟ ಆಚಾರದ ಸ್ವರೂಪವು ಈ ಶ್ರೀವೈಷ್ಣವಾಚಾರಾ ನುಷ್ಠಾನವುವೇ ಮುಮುಕ್ಷುಗಳಿಗೆ ಅನುಷ್ಠೇಯವೆಂಬ ವಿಷಯದಲ್ಲಿ ಶಾಸ್ತ್ರ ಪ್ರಮಾಣವು ಹೀಗಿರುವುದು. ಪಾಂಚರಾತ್ರದಲ್ಲಿ

> ತ್ರಿಷುವರ್ಣೇಷುಸಂಭೂತೋ, ಮಾಮೇವಶರಣಂಗತಃ ।
> ನಿತ್ಯನೈಮಿತ್ತಿಕರತೋ, ಮದೀಯಾರಾಧನೇಪರಃ ॥
> ಮತ್ಸಾಯುಜ್ಯಂಚಸರ್ವೇಷಾಂ, ವೈಷ್ಣವಾಚಾರ ಸೇವನಾತ್ ॥

ಈ ವೈಷ್ಣವಾಚಾರನಿಷ್ಕರ್ಷೆಯ ವಿಷಯದಲ್ಲಿ ಪ್ರತಿಪಾದಿಸಲ್ಪಡುವ ಶ್ರೀವೈಷ್ಣಲಕ್ಷಣವೂ, ತನ್ನಿಷ್ಠವಾದ ಆಚಾರವೂ ಮತ್ತು ಆ ಆಚಾರದ ನಿಷ್ಕರ್ಷೆ ಇವುಗಳ ವಿಚಾರವನ್ನು ಸರ್ವರೂ ಅರಿಯಬೇಕಾದದ್ದು ಅತ್ಯಾವಶ್ಯಕವು.

ಶ್ರೀ ವೈಷ್ಣವಲಕ್ಷಣವು —ಶ್ರೀವೈಷ್ಣವಲಕ್ಷಣವು "ಬಾಹ್ಯ" ಮತ್ತು "ಆಂತರ" ಲಕ್ಷಣಗಳಿಂದು ಎರಡು ವಿಧ "ಬಾಹ್ಯ ಲಕ್ಷಣವು" ಪದ್ಮ ಪುರಾಣದಲ್ಲಿ" ಈ ರೀತಿ ಹೇಳಿರುವುದು(ಭಾಗವತೇಕ್ರ "ಯೇಕಂಠಲಗ್ನ ತುಳಸೀನಳಿನಾಕ್ಷಮಾಲಾಃ, ಯೇಬಾಹು ಮೂಲಪರಿಚಿಹ್ನಿತ ಶಂಖಚಕ್ರಾಃ॥ ಯೇವಾಲಲಾಟ ಫಲಕೇಲಸದೂರ್ಧ್ವಪುಂಡ್ರಾ। ಸ್ತೇವೈಷ್ಣವಾಭುವನಮಾಶುಪವಿತ್ರಯನ್ತಿ॥ ಎಂಬ ವಚನ ರೀತ್ಯಾ ಪ್ರಥಮತಃ ಶಿರಃ, ಕಂಠ, ಬಾಹು – ಮಸ್ತಕಗಳಲ್ಲಿ ಧರಿಸಲ್ಪಟ್ಟ ತುಳಸಿ–ನಳಿನಾಕ್ಷ (ಎಂದರೆ ತುಲಸಿಮಣಿ ಕಮಲಮಣಿ) ಮಾಲೆಗಳೂ, ಎರಡನೆಯದಾಗಿ, ಬಾಹುಮೂಲ ಗಳಲ್ಲಿ ಶಂಖಚಕ್ರಾಂಕಿತ ಲಾಂಛನಗಳೂ, ಮೂರನೆಯದಾಗಿ ಹಣೆಯಲ್ಲಿ ಮುಖ್ಯವಾಗಿ ಶ್ವೇತಮೃತ್ತಿಕಾಧಾರಣವೂ ಮತ್ತು ಮಧ್ಯೆ ಶ್ರೀಚೂರ್ಣಲಾಂಛನವೂ ಶ್ರೀವೈಷ್ಣ ವರ ಬಾಹ್ಯ ವೇಷಗಳಾಗಿ ನಿರ್ಧರಿಸಲ್ಪಟ್ಟಿವೆ ಮೇಲಿನ ಶ್ಲೋಕದಲ್ಲಿ "ಲಸದೂರ್ಧ್ವ ಪುಂಡ್ರಾಃ" ಎಂಬ ಶಬ್ದಕ್ಕೆ "ಶ್ವೇತಮೃದೂರ್ಧ್ವಪುಂಡ್ರ" ವೆಂದು ಹೇಗೆ ನಿರ್ಧರಿಸ ಬಹುದು ? ಎಂಬ ಪ್ರಶ್ನೆಯು ಹೊರಡಬಹುದು ನಾರದೀಯ ಪುರಾಣದಲ್ಲಿ

"ಶ್ವೇತಮೃತ್ತಿಕಯೋವಾರ್ಯೈಃ । ಶ್ಯಾಮಯಾಪೀತಯಾಪಿವಾ।
ಊರ್ಧ್ವಪುಂಡ್ರಂದ್ವಿಜೈಃ ಕಾರ್ಯಂ। ವೈಷ್ಣವೈಶ್ಚ ವಿಶೇಷತಃ ॥

ಎಂದು ಶ್ವೇತಶ್ಯಾಮ ಮತ್ತು ಪೀತಾದಿ ಊರ್ಧ್ವಪುಂಡ್ರಗಳಲ್ಲಿ ಸಾಮಾನ್ಯರಾದ ದ್ವಿಜರಿಗೆ ಶ್ಯಾಮಪೀತಾದಿ ಮೃದ್ಧಾರಣವೂ ಆರ್ಯರಾದ-ಶ್ರೀವೈಷ್ಣವರಿಗೆ "ಶ್ವೇತ ಮೃದ್ಧಾರಣ"ವೂ ಸಚ್ಛಾಸ್ತ್ರ ಸಮ್ಮತವಾಗುವುದರಲ್ಲಿ ಯಾವ ಅಭ್ಯಂತರವೂ ಇಲ್ಲ. ಅದೂ ಅಲ್ಲದೆ "ಶಂಖಚಕ್ರೋರ್ಧ್ವ ಪುಂಡ್ರಾದಿ, ಧಾರಣಂ ದಾಸ್ಯಲಕ್ಷಣಂ। ತನ್ನಾ ಮಕರಣಂಚೈವ, ವೈಷ್ಣವಂತದಿಹೋಚ್ಯತೇ॥ ಇತ್ಯಾದಿ ಸ್ಮೃತೀತಿಹಾಸ ಪುರಾಣೋಕ್ತ ವಚನರೀತ್ಯಾ ಈ ಲಕ್ಷಣಗಳು ವೈಷ್ಣವಲಕ್ಷಣಗಳಾಗಿಯೂ ಮತ್ತು ಆಮಹಾ ವಿಷ್ಣುವಿಗೆ ದಾಸ್ಯತ್ವದ ಚಿಹ್ನೆಗಳಾಗಿಯೂ ಗಣಿಸಲ್ಪಟ್ಟಿವೆ

ಕೂರ್ಮಪುರಾಣದಲ್ಲಿ "ಪತಿವ್ರತಾನಿಮಿತ್ತಂಹಿ – ವಲಯಾದಿವಿಭೂಷಣಂ" (ಪು–250, ಗುರುಪರಂದರಾ ಪ್ರಭಾವಃ) ಎಂದು ಪತಿವ್ರತೆಯರಾದ ಸುಮಂಗಲಿಗಳಿಗೆ ಬಳೆ ಇತ್ಯಾದಿಗಳು ಹೇಗೆ ಬಾಹ್ಯಲಕ್ಷಣಗಳೋ, ಹಾಗೆಯೇ ಶಂಖಚಕ್ರೋರ್ಧ್ವ ಪುಂಡ್ರಾದಿಗಳು ಶ್ರೀವೈಷ್ಣವ ಬಾಹ್ಯಲಕ್ಷಣಗಳಾಗಿ ನಿಷ್ಕರಿಸಲ್ಪಟ್ಟಿವೆ ಈ ಬಾಹ್ಯ ಲಕ್ಷಣಗಳು ಅವಶ್ಯಕವಾದಾಗ್ಯೂ ಈ ವೈಷ್ಣವಾಚಾರವು ಹೃದ್ಗತವಾಗುವಾಗ, ಅಂತಃಕರಣ ಶುದ್ಧಿಯು ತದನುಗುಣವಾಗಿ ಉಂಟಾಬೇಕು ಶ್ರೀಮನ್ನಾರಾಯಣ ನಿಗೂ–ತನಗೂ ಇರುವ

"ತದೀಯ"ಪರ್ಯಂತವಾಗಿ ಪರ್ಯವಸಾನವಾಗುವುದು. ತದೀಯರೆಂದರೆ ಭಗವದ್ಭಕ್ತರು, ಭಗವಂತನಲ್ಲಿ ನಾವು ಮಾಡುವ ಭಕ್ತಿಯು ಕಾರ್ಯತಃ ತೋರುವಾಗ, ಅದು "ಭಾಗವತ ಪ್ರಪತ್ತಿ" ರೂಪವಾಗಿ ಪರಿಣಮಿಸಿದಾಗಲೇ ಫಲಕಾರಿಯಾಗುವುದು ಎಂಬುವುದೇ ಭಗವದ್ಭಾಗವತಾದಿಗಳ ಮತವು ಇದಕ್ಕೆ ಅನೇಕ ಪ್ರಮಾಣಗಳನ್ನು ನೋಡಬಹುದು

**ಬೋಧಾಯನೀಯೇ :—**

"ಸರ್ವಸ್ಯ ಪ್ರಭವೋಯಸ್ಮಾದ್ವಿಷ್ಣು ಪಾದಾಶ್ರಯೋನರಃ।
ತನ್ಮೂಲತಃ ಕ್ರಿಯಾಸ್ಸರ್ವಾಸ್ಸಫಲಾಸ್ತು ಭವನ್ತಿಹಿ॥
ಸಿದ್ಧೇತದೀಯಶೇಷತ್ವೇ ಸರ್ವಾರ್ಥಾಸ್ಸಂಭವನ್ತಿಹಿ ॥"

**ಶಾಂಡಿಲ್ಯಃ :—**

ಸಿದ್ಧಿರ್ಭವತಿವಾನೇತಿ ಸಂಶಯೋಽಚ್ಯುತ ಸೇವಿನಾಂ।
ನಸಂಶಯೋಸ್ತಿ ತದ್ಭಕ್ತಪರಿಚರ್ಯಾರತಾತ್ಮನಾಂ॥

**ಶ್ರೀಶುಕಃ :—**

ಲಕ್ಷ್ಮೀಭರ್ತುರ್ನರಹರಿತನೋರ್ದಾಸದಾಸಸ್ಯದಾಸಃ॥ (ಭಾಗವತೇ)

**ವಾಮನಪುರಾಣೇ .—**

ದಾಸೋಹಂವಾಸುದೇವಸ್ಯ, ದೇವದೇವಸ್ಯಶಾರ್ಙ್ಗಿಣಃ।
ಯೇನಮಸ್ಯನ್ತಿಸತತಂ, ನಾರಾಯಣಮನಾಮಯಂ॥
ತೇಷಾಂಚದಾಸದಾಸೋಹಂ, ಪುನರ್ಜನ್ಮನಿಜನ್ಮನಿ॥

**ನಾರದ ಃ—**

ಜನ್ಮಾನ್ತರಸಹಸ್ರೇಷು, ಯಸ್ಯಸ್ಯಾದ್ಭಕ್ತಿರೀದೃಶೀ।
ದಾಸೋಽಹಂವಿಷ್ಣು ಭಕ್ತಾನಾಂಇತಿಸರ್ವಾರ್ಥಸಾಧಿನೀ।
ಸಯಾತಿ ವಿಷ್ಣುಸಾಯುಜ್ಯಂ, ಪುರುಷೋನಾತ್ರಸಂಶಯಃ ॥

ಗಚ್ಛತಾಮಾತುಲಕುಲಂ, ಭರತೇನತವಾನಘಃ ।
ಶತ್ರುಘ್ನೋ ನಿತ್ಯ ಶತ್ರುಘ್ನೋನೀತಃ ಪ್ರೀತಿಪುರಸ್ಕರಃ॥ (ರಾಮಾಯಣೆ)

"ಅಡಿಯಾರ್ಕರ್ಳ್ತಮ್ಮೈಯಿರ್ಕವುಂ ಪೆರುವಾರ್ಕಳೇ (ಪೆರಿ· ತಿ 4–4–10)
"ತೊಂಡರ್ಶೇವಡಿಶೇಳುಂ ಶೇರ್ರೇಶೆನ್ನಿಕ್ಕಣಿವನೇ" (ಪೆರು ತಿ 2-3)
"ಅಡಿಯಾರ್ಕಾಳ್ಪಡುತ್ತ ವಿಮಲರ್॥ (ಅಮಲನಾದಪಿರಾನ್)

"ಕಡಲ್ ಮಲ್ಯೈತ್ತಲ ಶಯನತ್ತುರೆ ವಾರ್ೈಕೊಂಡಾಡುಂ ನಂಜುಡೈಯರನ
ರೆಂಗಳ್ ಕುಲದೈವಮೇ (ತಿ ಮೊ 2–6–4)

"ಕಣ್‌ಶೇರ್ೈಯೆಂಬೆರುಮಾನ್‌ತಾಳ್ ತೊಳುವಾರ್ ಕಾಣ್ಮೈನೇನ್‌ತಲ್ಯೈಮೇಲಾರೇ
(ತಿ ಮೊ 7–4–12)

"ಪಾರ್ಕಡಲ್ ಶ್ರೇನ್ದ್ರಪರಮನ್ಯೈಪ್ಪಯಿಲುಂ ತಿರುವುಡ್ಯೈಯಾರ್ ಎಮ್ಮೈ
ಯಾಳುಂಪರಮರೇ (ತಿವಾಯ್ 3–7–1)

ಇತ್ಯಾದಿ ಪ್ರಮಾಣಗಳಿಂದ "ಶ್ರೀವೈಷ್ಣವಾಚಾರ" ನಿಷ್ಕರ್ಷವಾದ ತದೀಯ ಶೇಷತ್ವವೇ ನಾಸ್ತಿಕರಾದ ಮಹರ್ಷಿಗಳಿಗೂ, ನಿತ್ಯಸೂರಿಗಳಿಗೂ, ಆಳ್ವಾರುಗಳಿಗೂ ಆಚಾರ್ಯರುಗಳಿಗೂ ಆದರಣೀಯವಾಗಿದ್ದುದೆಂಬುದು ಸುಪ್ರಸಿದ್ಧವು

"ತವದಾಸ್ಯಸುಖೈಕಸಂಗಿನಾಂ। ಭವನೇಸ್ತ್ವಪಿ ಕೀಟಜನ್ಮಮೇ।
(ಸ್ತೋತ್ರರತ್ನ 55)

"ತ್ವದ್ದಾಸದಾಸ ಚರಮಾವಧಿ ದಾಸದಾಸ।
ದಾಸಸ್ಯದಾಸ ಇತಿಮಾಂಸ್ಮರಲೋಕನಾಥ (ಮುಕುಂದಮಾಲ)

"ತ್ವದ್ದಾಸದಾಸ ಗಣನಾಚರಮಾವಧೌಯ।
ಸ್ತದ್ದಾಸತೈಕರಸತಾಽವಿರತಾಮಮಾಸ್ತು (ಯತಿ ವಿಂ 16)

ಇತ್ಯಾದಿಗಳಿಂದ ಉತ್ತಮಾಶ್ರಮಿಗಳಾದ ಪೂರ್ವಾಚಾರ್ಯಶ್ರೇಷ್ಠರಾದ 'ಯಾಮುನ ವರವರ ಮುನಿಗಳ ತದೀಯಶೇಷತ್ವವು ಸುಪ್ರಸಿದ್ಧವು

ಆದ್ದರಿಂದ "ಮತ್ಸಾಯುಜ್ಯಂಚಸರ್ವೇಷಾಂ, ವೈಷ್ಣವಾಚಾರ ಸೇವನಾತ್" ಎಂಬ ಪಾಂಚರಾತ್ರೋಕ್ತ ಭಗವದ್ವಚನದಲ್ಲಿ ಹೇಳಿರುವ ವೈಷ್ಣವ ಶಬ್ದದಿಂದ "ಯೇ ಕಂಠಲಗ್ನ ತುಳಸಿ ನಳಿನಾಕ್ಷಮಾಲಾ" ಇತ್ಯಾದಿ ಪಾದ್ಮಪುರಾಣೋಕ್ತ ಬಾಹ್ಯವಿಶೇಷಣಗಳಿಂದಲೂ, "ಪಿತಾಚರಕ್ಷಕಶ್ಶೇಷಿ" ಇತ್ಯಾದಿ ಮನುರಾಜಪದತ್ರಯೋಕ್ತ ಭಗವತ್ಸಂಬಂಧಯುಕ್ತವಾದ ಆಂತರವಾದ ವೀತರಾಗತ್ವದೊಡನೆಯೂ ಕೂಡಿದ ಶ್ರೀ ವೈಷ್ಣವ ಏಕಾನ್ತಿ ಪರಮೈಕಾನ್ತಿಗಳಾದ ವಿಷ್ಣುಭಕ್ತರನ್ನೂ "ಆಚಾರ"ಶಬ್ದದಿಂದ ಸರ್ವೋಪಾಯ ಶ್ರೇಷ್ಠವಾದ "ಪ್ರಪತ್ತಿಯನ್ನೂ" ಸೇವನ ಶಬ್ದದಿಂದ ತತ್ಪ್ರವೃತ್ತ್ಯನುಷ್ಠಾನವು ತದೀಯಪರ್ಯಂತವಾಗಿ ಹೋಗಿ ನಿಲ್ಲುವುದೆಂಬ ವಿಷಯವನ್ನೂ ಭಗವತ್ಸಾಯುಜ್ಯೇಚ್ಛೆಯುಳ್ಳ ಶ್ರೀವೈಷ್ಣವರುಗಳು ತಿಳಿಯತಕ್ಕದ್ದು.

ಈ ರೀತಿಯಾಗಿ ನಿಷ್ಕೃಷ್ಟಾತ್ಮಸ್ವರೂಪವಾಗಿ ಭಗವದತ್ಯಂತ ಪ್ರಿಯಕರವಾಗಿರುವ ಶ್ರೀವೈಷ್ಣವಾಚಾರ ನಿಷ್ಕರ್ಷವು "ಶ್ರುತಿಸ್ಮೃತೀಮಮೈವಾಜ್ಞೇ' ಎಂಬ ಶಾಸ್ತ್ರಾರ್ಥವನ್ನೊಳಕೊಂಡು "ಮತ್ಸಾಯುಜ್ಯಂಚ ಸರ್ವೇಷಾಂ ವೈಷ್ಣವಾಚಾರಸೇವನಾತ್'

ಎಂಬ ಭಗವದ್ವಚನರೀತ್ಯಾ ಭಗವತ್ಪ್ರಾಪ್ತಿಗೆ ಪ್ರಧಾನೋಪಾಯವಾಗಿರುವುದೆಂಬ ವಿಷಯವು ವಿಶದವಾಗಿರುವುದು ಈ ಶ್ರೀವೈಷ್ಣವಾಚಾರಾನುಷ್ಠಾನಪರರು "ಅನನ್ತ ವಿಹಗೇಶಾದ್ಯೈರರ್ಚಿತಃ ಸರ್ವದೇವತ್ಯೈಃ। ತೇಷಾಮನ್ಯತಮೋಭೂತ್ವಾಮೋದತೇ ತತ್ರ ದೇವವತ್। ದಾಸವತ್ಪುತ್ರವತ್ತಸ್ಯ ಮಿತ್ರವದ್ಬಂಧುವತ್ಸದಾ' ಎಂಬ ಪಾಂಚ ರಾತ್ರ ಶಾಸ್ತ್ರವಚನದ ಪ್ರಕಾರವಾಗಿಯೂ 'ಸ್ಸೋಶ್ನುತೇಸರ್ವಾನ್ ಕಾಮಾನ್ ಸಹ ಬ್ರಹ್ಮಣಾ ವಿಪಶ್ಚಿತಾಃ" (ತೈ. ಆರ), "ಸರ್ವದಾದೂರ ವಿಧ್ವಸ್ತದುಃಖ ಲೇಶಲ ವಾಂಶಕಃ। ಗುಣಾನುಭವಜಪ್ರೀತ್ಯಾ ಕುರ್ಯಾದ್ದಾಸ್ಯಮಶೇಷತಃ" (ಹಾರೀತಸ್ಮೃತಿ) ಇತ್ಯಾದಿ ಶಾಸ್ತ್ರಪ್ರಮಾಣ ರೀತ್ಯಾ ಪರಮಪದವಾದ ವೈಕುಂಠದಲ್ಲಿ ಅನನ್ತವಿಹಗೇಶಾದಿ ನಿತ್ಯಸೂರಿಗಳೊಡನೆ ಕಲೆತು ಅಖಂಡವಾದ ಬ್ರಹ್ಮಾನುಭವ ಪೂರ್ವಕವಾಗಿ, ಭಗವಂತನ ಸರ್ವವಿಧ ಕೈಂಕರ್ಯವನ್ನೂ ಮಾಡುತ್ತಾ ಶಾಶ್ವತವಾದ ಬ್ರಹ್ಮಾನಂದವನ್ನು ಅನುಭವಿ ಸುತ್ತಿರುವರು, ಎಂದು ಮೇಲಿನ ಶಾಸ್ತ್ರವಚನಗಳಿಂದ ತಿಳಿದುಬರುವುದು.

---

# ಎರಡನೆಯ ಅಧ್ಯಾಯ

**ಶಿಷ್ಟಾಚಾರ್ಯ ಪರಂಪರೆ :—**

ಶ್ರಿಯಃಪತಿಯಾದ ಶ್ರೀಮನ್ನಾರಾಯಣನು ಪರಮರಹಸ್ಯವಾಗಿ ಶ್ರುತಿಶಿರಸಿಸಿ ಗೂಢವಾದ ಈ ಶ್ರೀವೈಷ್ಣವಾಚಾರ ನಿಷ್ಕರ್ಷೆಯನ್ನು ನಿತ್ಯಸೂರಿಗಳೂ ಮತ್ತು ಮುಕ್ತರೂ ಅರಿತು ಅನುಷ್ಠಿಸುತ್ತಿರುವಂತೆ ಈ ಲೀಲಾವಿಭೂತಿಯಲ್ಲಿರುವ ಜೀವರುಗಳೂ ಅರಿತು ತದನುಷ್ಠಾನದಿಂದ ಪರಮೋಪೇಯವಾದ ತನ್ನನ್ನು ಸೇರಿ ನಿತ್ಯಕೈಂಕರ್ಯ ಪರರಾಗಿ ಅಖಂಡಾನುಭವವನ್ನು ಅನುಭವಿಸಬೇಕೆಂಬ ತನ್ನ ಪರಮ ಕಾರುಣ್ಯದಿಂದ ತಾನೇ ಗುರುರೂಪದಿಂದ ಅವತರಿಸಿ ಅನೇಕರಿಗೆ ಉಪದೇಶಿಸಿ, ಆ ಉಪದೇಶವು ಹೃದ್ಗತವಾಗುವಂತೆ ಮಾಡಿದನು. ಈ ಉಪದೇಶವು ಅಂಧಕಾರಾನ್ವಿತವಾದ ಈ ಲೀಲಾವಿಭೂತಿಗೆ ದೇದೀಪ್ಯಮಾನವಾದ ಒಂದು ಜ್ಞಾನದೀಪವನ್ನು ಹತ್ತಿಸಿಟ್ಟಂತೆ ಸ್ಥಿರವಾಗಿ ನಿಂತಿತು.

ವೇದಾನ್ತಾದಿ ಶಾಸ್ತ್ರಗಳನ್ನು ಮೊಟ್ಟಮೊದಲು "ಶಾಸನಾಚ್ಛಾಸ್ತ್ರಂ" ಎಂಬ ರೀತಿಯಾಗಿ ಜೀವರುಗಳಿಗೆ ಅನುಗ್ರಹಿಸಿ, ಕರ್ಮ, ಜ್ಞಾನ ಭಕ್ತಿಯೋಗಾದಿಗಳಿಂದ ತನ್ನನ್ನು ಆರಾಧಿಸಿ ಉಜ್ಜೀವಿಸಲೆಂದು ಎಣಿಸಿದನು. ಕಾಲಕ್ರಮೇಣ ಈ ಮಾರ್ಗಗಳು ಖಿಲವಾಗಿ, ಜನರು ದೇಹಾತ್ಮ ವಿವೇಕಾಂಧರಾಗಿ, ದೋಷಭಾಗಿಗಳಾಗಿ, ಸಾಂಸಾರಿಕ ಸುಖಗಳಲ್ಲಿ ಮಗ್ನರಾಗಿ ತೊಳಲುತ್ತಿರುವುದನ್ನು ಕಂಡು ಪರಮಶೇಷಿಯಾದ ಶ್ರೀಮನ್ನಾರಾಯಣನು ಇವರ ವಿಷಯದಲ್ಲಿ ದಯಾವಾತ್ಸಲ್ಯಪೂರಿತನಾಗಿ, ಶ್ರೀಯಃ ಪತಿಯಾದ ತನ್ನ ವ್ಯಾಪ್ತ್ಯಾದಿಗಳಿಗೆ ಮುಕ್ತಿಪ್ರದತ್ವವೇ ಪ್ರಯೋಜನವಾದ್ದರಿಂದ ಕರ್ಮಯೋಗ ಜ್ಞಾನಯೋಗ ಪ್ರಾಪ್ತಿಗಾಗಿ ಇವರು ಅನುಷ್ಠಿಸುತ್ತಿರುವ ಮಾರ್ಗವು ದೋಷಪೂರಿತವಾಗಿರುವುದನ್ನು ತಿಳಿದು, ಕೃಷ್ಣಾವತಾರವನ್ನು ಮಾಡಿ, ಅರ್ಜುನನಿಗೆ ಗೀತೋಪದೇಶವನ್ನು ಮಾಡುವ ನೆಪದಿಂದ "ಮಾಮೇಕಂ" (ಗೀ. 18–66) ಎಂದು ತನ್ನನ್ನು ತಾನೇ ತೋರಿಸಿಕೊಂಡು "ತಾನೇ ಸರ್ವಸ್ಮಾತ್ಪರನು" ಎಂಬುದನ್ನು ವಿಶದೀಕರಿಸಿ ಗೀತೋಪದೇಶದ ಮೂಲಕ ತತ್ತ್ವಹಿತ ಪುರುಷಾರ್ಥಗಳನ್ನು ಲೋಕಕ್ಕೆ ಅನುಗ್ರಹಿಸಿದನು.

ಈ ಅವತಾರೋಪದೇಶವೂ ತಾತ್ಕಾಲಿಕವಾಗಿ ಆಚರಣೆಯಲ್ಲಿದ್ದು ಕಾಲಕ್ರಮೇಣ ಅದು ಮರೆತುಹೋಗುತ್ತಿರುವುದನ್ನೂ, ತನ್ನ ಪರ, ವ್ಯೂಹ, ವಿಭವ, ಅಂತರ್ಯಾಮಿ

ಮತ್ತು ಅರ್ಚಾರೂಪಗಳ ತತ್ತ್ವವು ಜನರ ಹೃದಯದಲ್ಲಿ ಸ್ಥಿರವಾಗಿ ನಿಲ್ಲದೆ ಇರುವು ದನ್ನೂ ನೋಡಿ "ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯನಾರಾಯಣಸ್ಥಿತಃ" (ತೈ ನಾ-11) ಎಂಬಂತೆ ತಾನು ಎಲ್ಲೆಲ್ಲಿಯೂ ಪರಿಪೂರ್ಣನಾಗಿ ವಿಭುವಾಗಿರುವವನಾದ್ದರಿಂದ, ಇವರುಗಳಿಗೆ ಇಷ್ಟಪ್ರಾಪ್ತಿ ಮತ್ತು ಅನಿಷ್ಟ ನಿವಾರಣೆಗಳನ್ನು ಮಾಡಿಕೊಡುವ ಸ್ಥಳವು ಎಲ್ಲೆಲ್ಲಿಯೂ ಪ್ರಚಾರದಲ್ಲಿರಬೇಕೆಂಬ ತನ್ನ ದಿವ್ಯಾಭಿಲಾಷೆಯಿಂದ "ಜಂಗಮ ಶ್ರೀನಿವಾಸಾನಿ ಹೃದಯಾನಿ ಮನೀಷಿಣಾಂ" ಎಂಬ ವಾಕ್ಯಪ್ರಕಾರವಾಗಿ ತಾನು ಭಾಗವತರ ಹೃದಯದಲ್ಲಿಯೇ ನೆಲೆಸಿ, ಅವರ ಮೂಲಕವಾಗಿ ತತ್ತ್ವಜ್ಞಾನವನ್ನು ಪ್ರಚಾರ ಮಾಡಿದನು ಕೃಷ್ಣಾವತಾರದ ಅನಂತರ ಕಲಿಯುಗದಲ್ಲಿ ಬಗವದ್ಭಕ್ತರುಗಳ ಸಂಖ್ಯೆಯು ಅಪರಿಮಿತವಾಗಿದ್ದು ಅವರ ಮೂಲಕವಾಗಿ ಭಗವಂತನು ಭಕ್ತಿ ಪ್ರಪತ್ತ್ಯಾ ದಿಗಳನ್ನು ಬಹು ವಿಧವಾಗಿ ಪ್ರಚಾರಕ್ಕೆ ತಂದನು ಭಾಗವತೋತ್ತಮರಾದ ಸಾಧುಗಳ ಹೃದಯದಲ್ಲಿಯೂ ವಾಕ್ಕಿನಲ್ಲಿಯೂ ನೆಲೆಸಿ ಸರ್ವತೋಮುಖವಾಗಿ ಶ್ರೀವೈಷ್ಣವಾಚಾರ (ಸಂಪ್ರದಾಯ) ವನ್ನು ಪ್ರಚಾರಪಡಿಸಿದನು. ಈ ಕಾರಣ ದಿಂದಲೇ ತದೀಯ ಶೇಷತ್ವವೂ, ತದೀಯ ಕೈಂಕರ್ಯವೂ ಭಗವತ್ಕೈಂಕರ್ಯದ ಮಹತ್ವ ಕ್ಕಿಂತಲೂ ಶ್ರೇಷ್ಠವೆನಿಸಿ ಈ ಶ್ರೀವೈಷ್ಣವ ಮತದಲ್ಲಿ ಪ್ರಚಾರಕ್ಕೆ ಬಂದವು 'ತದೀಯ' ಎಂದರೆ ಭಗವದ್ಭಕ್ತರೆಂದು ಅರ್ಥ

"ನಿರಪೇಕ್ಷಂ ಮುನಿಂಶಾನ್ತಂ। ನಿರ್ವೈರಂ ಸಮದರ್ಶಿನಂ। ಅನುವ್ರಜಾಮ್ಯಹಂ ನಿತ್ಯಂ" ಎಂದೂ, "ಸಾಧವೋಹೃದಯಂ ಮಹ್ಯಂ। ಸಾಧೂನಾಂ ಹೃದಯಂ ಹ್ಯಹಂ। ಮದನ್ಯಂತೇನಜಾನನ್ತಿ। ನಾಹಂತೇಭ್ಯೋ ಮನಾಗಪಿ" ಎಂದೂ, "ವಶೀಕುರ್ವನ್ತಿ ಮಾಂ ಭಕ್ತ್ಯಾ। ಸ್ಸಸ್ತ್ರಿಯಾಸ್ಸತ್ಪತಿಂಯಥಾ" ಇತ್ಯಾದಿ ಪ್ರಮಾಣಗಳಿಂದ ಭಗವದ್ಭಕ್ತರ ಲಕ್ಷಣಗಳನ್ನು ತಾನೇ ಹೇಳಿರುವನು. ಆ ಭಕ್ತರಲ್ಲಿಯೂ ಉತ್ತಮ ಭಕ್ತರ ಲಕ್ಷಣ ಗಳನ್ನು ವಿವರಿಸುತ್ತಾ "ವಾಸುದೇವ ಸ್ಸರ್ವಮಿತಿ, ಸಮಹಾತ್ಮಾ ಸುದುರ್ಲಭಃ" (ಭ. ಗೀ 7-19) ಎಂದೂ, ಉಣ್ಣುಂಶೋರುಂ ಪರುಗುನೀರ್ತಿನ್ನುಂ ವೆಟ್ರಿಲೈ ಯೆಲ್ಲಾಂ ಕಣ್ಣನ್" (ತಿ ವಾಯ್. 6-7-1) ಎಂದೂ, "ಯಾವರಾಯ್ ನಿರ್ಕಿನ್ರ ದೆಲ್ಲಾಂ ನೆಡುಮಾಲೆನ್ ರೋರಾದಾರ್ ಕರ್ಕಿನ್ರದೆಲಾಂ ಕಡ್ಕೈ" (4 ತಿ.ರು ) ಎಂದೂ "ಎನ್‌ಕರುತ್ತೈಯುರವೀಟ್ರಿರುಂದಾನ್" (ತಿ ವಾಯ್ 8-7-1) ಎಂದೂ "ಉರು ವಮು ವೂರುಯಿರುಮುಡನೇಯುಂಡಾನ್ (ತಿ ವಾಯ್.) ಎಂದೂ ಆ ಭಾಗವತೋ ತ್ತಮರಿಂದಲೇ ತನ್ನ ಸರ್ವಾನ್ತರ್ಯಾಮಿತ್ವವನ್ನೂ, ತನ್ನ ಸರ್ವಕಾರಣತ್ವವನ್ನೂ ಅವರ ಬಾಯಿಂದಲೇ ಹೇಳಿಸಿಯೂ; "ಜ್ಞಾನೀತ್ವಾತ್ಮೈವಮೇಮತಂ" (ಭ ಗೀ. 7-18) ಎಂದು ಆ ಭಾಗವತೋತ್ತಮರೇ ತನ್ನ ಆತ್ಮವೆಂದೂ ಮತ್ತು ಅವರೇ ತನಗೆ ಧಾರಕ ರೆಂಬ ಭಾವವನ್ನೂ ಸೂಚಿಸಿದ್ದಲ್ಲದೆ ಆ ಭಾಗವತೋತ್ತಮರಿಗೆ ತಾನು ಪರತಂತ್ರನೆಂಬ ಭಾವವನ್ನೂ ವ್ಯಕ್ತಪಡಿಸಿಡಿದನು

ಅದೂ ಅಲ್ಲದೆ "ಕಾಸಾರಸಂಯಮಿಮುಖಾಃ ಕಮಲಾಸಹಾಯ! ಭಕ್ತಾಃಪ್ರಪತ್ತಿ ಪದವೀನಿಯುತಾ ಮಹಾನ್ತಾಃ" (ದಿವ್ಯಸೂರಿ ಚರಿತ್ರೆ) ಎಂದೂ "ಭಕ್ತಾನೇಕ ಪರಾಂಕುಶಾದಿಪುರುಷಾನ್" ಎಂದೂ, "ಯಸ್ಯಾಭವನ್ನವಯವಾ ಇವಪಾರತನ್ತ್ರಾತ್" ಇತ್ಯಾದಿ ಶ್ರೀಸೂಕ್ತಿಗಳ ಪ್ರಕಾರ ಶ್ರೀಪರಾಂಕುಶ ಪರಕಾಲಾದಿ ಭಕ್ತಶ್ರೇಷ್ಠರನ್ನು ತನಗೆ ಅವಯವಗಳೆಂಬ ಭಾವವನ್ನೂ ಸೂಚಿಸಿದ್ದಲ್ಲದೆ ಶ್ರೀ ಶಠಕೋಪರ ದಿವ್ಯ ನಾಮವನ್ನೇ ತನ್ನ ದಿವ್ಯ ಚರಣಾರವಿಂದಗಳಿಗೆ ಅಸಾಧಾರಣವಾದ ನಿರೂಪಕವಾಗುವಂತೆ ಮಾಡಿ, ಅದರಿಂದ ಸರ್ವಶೇಷಿಯಾದ ತನಗೆ ಆ ಶಠಕೋಪನೇ ಪತಿಯು, ಎಂದರೆ ತಾನು ಭಕ್ತ ಪರಾಧೀನನು, ಎಂಬ ಅರ್ಥವನ್ನೂ ಸಕಲ ಮತಸ್ಥರಿಗೂ ಏಕಕಂಠರವಾಗಿ ಪ್ರಸಿದ್ಧಿ ಪಡಿಸಿದನು.

ಪರಮಪದದಲ್ಲಿ ಅನನ್ತ ವಿಹಗೇಶಾದಿ ಅಂತರಂಗ ಭಕ್ತರನೇಕರಿದ್ದರೂ, ಪರಮ ಭಾಗವತೋತ್ತಮರಾದ ಶಠಕೋಪ (ಎಂದರೆ ನಮ್ಮಾಳ್ವಾರ್) ರಲ್ಲಿ ತಮಗಿರುವ ಪಾರತಂತ್ರ್ಯ ಪಾರವಶ್ಯದಿಂದ ತಮ್ಮ ಶ್ರೀಪಾದಗಳಿಗೆ ಅವರ ನಾಮವನ್ನೇ ನಿರೂಪಕ ವನ್ನಾಗಿ ಮಾಡಿ ಆಚಂದ್ರಾರ್ಕವಾಗಿ ಆ ಆಳ್ವಾರ್‌ರಲ್ಲಿ ತಮಗಿರುವ ನಿರತಿಶಯಾಭಿಮಾನ ವನ್ನು ಪ್ರಕಾಶ ಪಡಿಸಿದನು.

ಕಾಲಾನುಕ್ರಮದಲ್ಲಿ ಈ ಶ್ರೀವೈಷ್ಣವಾಚಾರ ಧರ್ಮವನ್ನು ಮುಂದುವರಿಸಿ ಶಠಕೋಪ (ನಮ್ಮಾಳ್ವಾರ್) ರವರಿಗೆ ಮಧುರಕವಿ, ನಾಥಮುನಿಗಳಾದಿಯಾದ ಅಂತರಂಗ ಪಾದಾಶ್ರಿತರುಗಳಿದ್ದರೂ ಶಠಕೋಪರ ಶ್ರೀಪಾದಗಳಿಗೆ "ರಾಮಾನುಶನ್" ಎಂಬ ತಿರುನಾಮವನ್ನು ಪ್ರಸಿದ್ಧಿಯಾಗುವಂತೆ ಸಂಕಲ್ಪಿಸಿ "ಮಮಮದ್ಭಕ್ತಭಕ್ತೇಷು ಪ್ರೀತಿರಭ್ಯಧಿಕಾಭವೇತ್"ಎಂಬ ಅರ್ಥವನ್ನು "ಇರುಪ್ಪಿಡಂ ವೈಕುನ್ದಂ ವೇಂಗಡಂ"ಎಂಬ ಪಾಶುರದಿಂದ ಪ್ರಚಾರ ಪಡಿಸಿ ಶ್ರೀ ಭಗವದ್ರಾಮಾನುಜಾಚಾರ್ಯರಲ್ಲಿ ತನ್ನ ಸರ್ವಾಭಿ ಮಾನವನ್ನೂ ಸ್ಥಾಪಿಸಿ ಶ್ರೀ ವೈಷ್ಣವಾಚಾರ ಧರ್ಮವನ್ನು ಅವರ ಮೂಲಕವಾಗಿ ಸ್ಥಿರೀಕರಿಸಿಯೂ, ಪ್ರಚಾರಪಡಿಸಿಯೂ, ಉಭಯ ವಿಭೂತಿಗಳಲ್ಲಿಯೂ ಶ್ರೀಮದ್ರಾ ಮಾನುಜಾಚಾರ್ಯರಿಗೆ ಸರ್ವಾಧಿಕಾರವನ್ನು ದಯೆಪಾಲಿಸಿ, ಅವರಲ್ಲಿರುವ ಪ್ರೀತ್ಯತಿಶಯ ದಿಂದ ಆ ಶ್ರೀವೈಷ್ಣವ ಸಿದ್ಧಾನ್ತಕ್ಕೆ 'ರಾಮಾನುಜದರ್ಶನಂ' ಎಂಬ ಹೆಸರನ್ನು ಸ್ಥಾಪಿಸಿ, ಅದರಿಂದ ತಾನು ಸುಪ್ರೀತನಾದನು. ಅಷ್ಟರಲ್ಲಿಯೂ ತೃಪ್ತನಾಗದೆ ಅವರ ಮಾಹಾತ್ಮ್ಯವು ಇನ್ನೂ ಪ್ರಸಿದ್ಧಿಗೆ ಬರುವುದಕ್ಕೋಸ್ಕರವಾಗಿಯೂ, ತನಗೆ ಅವರಲ್ಲಿರುವ ಪ್ರೀತ್ಯಾತಿಶಯದ ಮಾಹಾತ್ಮ್ಯದಿಂದಲೂ ಭಗವದ್ರಾಮಾನುಜರನ್ನೇ ತನಗೆ ಗುರುವ ನ್ನಾಗಿ ಎಣಿಸಿ ತಾನು ಅವರಿಗೆ ಶಿಷ್ಯನಾಗಿ "ವೈಷ್ಣವನಂಬಿ" ಎಂಬ ದಾಸ್ಯ ನಾಮವನ್ನು ಅವರಿಂದ ಪಡೆದು "ರಾಮಾನುಶನ್ನೈಯುಡೈಯೋಂ",ಎಂದರೆ ಆ ರಾಮಾನುಜಾಚಾರ್ಯ

ರನ್ನು ಗುರುವನ್ನಾಗಿ ಪಡೆದೆನು ಎಂದು ವಿಶೇಷವಾಗಿ ಸಂತೋಷಿಸಿದ ವಿಷಯವು "ಗುರುಪರಂಪ್ರಭಾವಂ" ಎಂಬ ಗ್ರಂಥದಿಂದ ತಿಳಿದುಬರುವುದು

ಭಗವಂತನ ಶ್ರೀಪಾದಗಳಿಗೆ ಶ್ರೀ ಶಠಕೋಪಾಳ್ವಾರ್ರ ನಾಮವನ್ನೂ ಮತ್ತು ಶ್ರೀ ಶಠಕೋಪಾಳ್ವಾರ್ರ ಪಾದಪದ್ಮಗಳಿಗೆ ಭಗವದ್ರಾಮಾನುಜರ ನಾಮವನ್ನೂ ಸ್ಥಾಪಿಸಿದ ಕೆಲವು ಕಾಲದ ನಂತರ, ಮಲಿನವಾಗಿ ಹೋಗುತ್ತಿದ್ದ ಈ ಸತ್ಸಂಪ್ರದಾಯಾಚಾರವನ್ನು ಪುನರುದ್ಧರಣ ಮಾಡುವ ಸಂಕಲ್ಪದಿಂದ ಆ ಶ್ರೀವೈಷ್ಣವಾಚಾರವಾದ "ಭಗವದ್ರಾಮಾನುಜ ದರ್ಶನ" ವನ್ನು ಭಗವದ್ರಾಮಾನುಜಾಚಾರ್ಯರ ಅಪರಾವತಾರರಾದ ' ಶ್ರೀ ಮಣವಾಳ ಮಾಮುನಿಗಳವರಿಂದ ಪುನರುದ್ಧಾರವಾಗುವಂತೆ ಅನುಗ್ರಹಿಸಿದನು ಭಗವದ್ರಾಮಾನುಜಾಚಾರ್ಯರಿಗೆ ತ್ರಿದಂಡಪವಿತ್ರಗಳಂತೆ ಯಾವಾಗ್ಲೂ ಅನುಸರಿಸುತ್ತಿದ್ದ ಕೂರತ್ತಾಳ್ವಾನ್ ಮತ್ತು ಆಂಡಾನ್ ಇವರುಗಳು ಇದ್ದಾಗ್ಯೂ ಆ ರಾಮಾನುಜಾಚಾರ್ಯರಲ್ಲಿಯೇ ತಮ್ಮ ಸರ್ವಸ್ವವನ್ನೂ ಸಮರ್ಪಿಸಿ "ಆರ್ತಿಪ್ರಬಂಧ"ದ ಮೂಲಕ ಅವರಲ್ಲಿಯೇ ತಮ್ಮ ಸಂಪೂರ್ಣ ಶರಣಾಗತಿಯನ್ನು ಮಾಡಿ "ಯತೀಂದ್ರ ಪ್ರವಣರ್" ಎಂಬ ತಿರುನಾಮವನ್ನು ಪಡೆದ ಶ್ರೀಮದ್ವರವರಮುನಿ (ಮಣವಾಳಮಾಮುನಿ) ಗಳ ತಿರುನಾಮವೇ ಭಗವದ್ರಾಮಾನುಜಾಚಾರ್ಯರ ಶ್ರೀಪಾದಪದ್ಮಗಳಿಗೆ ನಿರೂಪಕವಾಗವಂತೆ ಪ್ರಸಿದ್ಧಿಪಡಿಸಿದನು

"ಮಮಮದ್ಭಕ್ತ ಭಕ್ತೇಷು ಪ್ರೀತಿರಭ್ಯಧಿಕಾಭವೇತ್" ಎಂಬ ತನ್ನ ದಿವ್ಯಸೂಕ್ತಿಯು ಪ್ರಸಿದ್ಧವಾಗುವಂತೆ ಶ್ರೀಮನ್ನಾರಾಯಣನು ಭಗವದ್ರಾಮಾನುಜಾಚಾರ್ಯರನ್ನು ತನ್ನ ಆಚಾರ್ಯರನ್ನಾಗಿ ಪರಿಗ್ರಹಿಸಿದಂತೆ ಶ್ರೀಮದ್ವರವರಮುನಿಗಳಲ್ಲಿಯೂ ತನಗಿರುವ ಪ್ರೀತ್ಯತಿಶಯಗಳಿಂದ ಒಂದು ಸಂದರ್ಭದಲ್ಲಿ ಶ್ರೀರಂಗನಾಥನು ತಿರುವಾಯ್‌ಮೊಳಿಯ ಈಡುಮುಪ್ಪತ್ತಾರಾಯಿರದ ವ್ಯಾಖ್ಯಾನವನ್ನು ಶ್ರೀರಂಗದಲ್ಲಿ ತನ್ನ ದೇವಾಲಯದಲ್ಲಿ ಶ್ರೀ ಮದ್ವರವರಮುನಿಗಳಿಂದ ಹೇಳಿಸಿ ಆ ಕಾಲಕ್ಷೇಪದ ಶಾತ್ತುಮುರೈಯ ಕಾಲದಲ್ಲಿ ತಾನೇ ಸ್ವತಃ" ಆ ಗೋಷ್ಠಿಯಲ್ಲಿ ಒಬ್ಬ ಸುಂದರ ಬಾಲಕನಾಗಿ ತೋರಿ "ಶ್ರೀಶೈಲೇಶ ದಯಾಪಾತ್ರಂ। ಧೀಭಕ್ತ್ಯಾದಿ ಗುಣಾರ್ಣವಂ॥ ಯತೀಂದ್ರಪ್ರವಣಂ ವಂದೇ। ರಮ್ಯಜಾ ಮಾತರಂ ಮುನಿಂ" ಎಂಬ ಶ್ರೀಮದ್ವರ ವರಮುನಿಗಳ ತನಿಯನನ್ನು ತಾನೇ ಅನುಸಂಧಿಸಿ ಅವರಲ್ಲಿ ಆಚಾರ್ಯ ಪ್ರತಿಪತ್ತಿಯನ್ನು ಮಾಡಿದುದಾಗಿ 'ಯತೀಂದ್ರ ಪ್ರವಣ ಪ್ರಭಾವಂ' ಎಂಬ ಗ್ರಂಥದಲ್ಲಿ ಹೇಳಿದೆ. ತಾನು ಅಲ್ಲಿ ಅನುಸಂಧಿಸಿದುದೂ ಅಲ್ಲದೆ ಬದರಿಕಾಶ್ರಮ, ತಿರುಮಾಲಿರಂಶೋಲೈ, ತಿರುಪತಿ ಮುಂತಾದ ಇತರ ದಿವ್ಯದೇಶಗಳಲ್ಲೆಲ್ಲಾ ಆತನಿಯನ್‌ಶ್ಲೋಕವನ್ನು ತನ್ನ ಅಂತರಂಗ ಭಕ್ತರುಗಳಿಗೆ ಏಕಕಾಲದಲ್ಲಿ ಪ್ರಚಾರಪಡಿಸಿದನು. ಈರೀತಿಯಾಗಿ ಪರಂಪರಾನುಕ್ರಮವಾಗಿ ಅನುಸರಿಸಿಕೊಂಡು ಬಂದಿರುವ ಶ್ರೀವೈಷ್ಣವಾಚಾರ ನಿಷ್ಕರ್ಷೆಯಲ್ಲಿ ನುರಿತು ಶಿಷ್ಯಾಗ್ರಗಣ್ಯ

ರಾದ ಯತೀಂದ್ರಪ್ರವಣರ ವೈಭವವನ್ನು ತನ್ನ ಭಕ್ತರು ತಿಳಿದು ಅವರಲ್ಲಿ ಆದರಾತಿಶಯವನ್ನು ತೋರಿ, ಅವರ ಧ್ಯಾನವನ್ನು ಮಾಡಿ ಸದ್ಗತಿಯನ್ನು ಹೊಂದಲೆಂಬ ಅಭಿಲಾಷೆಯಿಂದ ತನ್ನ ಅಷ್ಟಾಕ್ಷರಿ ಮಂತ್ರವಾದ 'ಓಮ್ ನಮೋ ನಾರಾಯಣಾಯ' ಎಂಬ ಪದಕ್ಕೆ ಸಮಾನವಾಗಿ "ಶ್ರೀಶೈಲೇಶ ದಯಾಪಾತ್ರಂ" ಎಂಬ ಅಷ್ಟಾಕ್ಷರಿ ಮಂತ್ರವನ್ನೂ ತಾನೇ ಸ್ತೋತ್ರರೂಪವಾಗಿ ಹೇಳಿದನು ಮತ್ತು ವೇದಮಂತ್ರಕ್ಕೆ ಆದಿಯಲ್ಲಿ "ಓಮ್" ಎಂಬ ಪ್ರಣವವನ್ನು ಉಚ್ಚರಿಸುವಂತೆ ದ್ರಾವಿಡ ವೇದಪಾರಾಯಣಗಳ ಆದಿಯಲ್ಲಿ ಈ "ಶ್ರೀಶೈಲೇಶ ದಯಾಪಾತ್ರಂ" ಎಂಬ ಸ್ತೋತ್ರರೂಪವಾದ ಪಾಶುರವನ್ನು ಸರ್ವರೂ ಅನುಸಂಧಿಸುವಂತೆ ಕಟ್ಟಳೆಯನ್ನೂ ಮಾಡಿಟ್ಟನು.

"ಇಯಲ್‌ಶಾಟ್ರು" ಎಂಬ ಪ್ರಬಂಧದಲ್ಲಿ "ನನ್ರುಂ ತಿರುವುಡೈಯೋಂ ನಾನಿಲತ್ತಿಲೆ ವುಯಿರ್‌ಕ್ಕುಂ। ಒನ್ರುಂಕುರೈಯಿಲ್ಲೈಯೋದಿನೋಂ। ಕುನ್ರುಂ ಎಡುತ್ತಾನ್ ಅಡಿಶೇರಿರಾಮಾನುಶನ್। ತಾಳ್‌ಪಿಡಿತ್ತಾರೈಪ್ಪಿಡಿತ್ತಾರೈಪ್ಪಟ್ರಿ" (ಪಿಳ್ಳೈಯುರಂಗವಲ್ಲಿದಾಸರ್ ಅರುಳಿಚ್ಚೈದತನಿಯನ್) ಎಂದರೆ–ಗೋವರ್ಧನೋದ್ಧಾರಕನಾದ ಶ್ರೀಕೃಷ್ಣನ ಪಾದಾಶ್ರಿತರಾದ ಭಗವದ್ರಾಮಾನುಜಾಚಾರ್ಯರ ಪಾದಸೇವಕರ ಸೇವಕರನ್ನು ಅಶ್ರಯಿಸುವ ದಾಸ್ಯಸಂಪತ್ತು ನಮಗೆ ಲಭಿಸಿತು. ಇದನ್ನು ಭೂಮಿಯಲ್ಲಿರುವ ನಾಲ್ಕು ದಿಕ್ಕುಗಳಲ್ಲಿಯೂ ಘಂಟಾಘೋಷವಾಗಿ ಉಪದೇಶಿಸಿದೆವು–ಎಂಬ ಪಾಶುರದ ರೀತ್ಯಾ "ತ್ವದ್ದಾಸದಾಸ ಚರಮಾವಧಿ ದಾಸದಾಸ। ದಾಸಸ್ಯದಾಸ ಇತಿಮಾಂಸ್ಮರ ಲೋಕನಾಥ" ಎಂಬ ಭಗವದ್ಭಾಗವತ ದಾಸ್ಯರೂಪವಾದ ಈ ಶ್ರೀವೈಷ್ಣವಾಚಾರವು ಪರಂಪರಾನುಗತವಾಗಿ (ಸಂಪ್ರದಾಯದಲ್ಲಿ) ನಮಗೆ ಪ್ರಾಪ್ತವಾಗಿರುವುದು

ಈ "ಕುನ್ರುಮೆಡುತ್ತಾನಡಿಶೇರಿ" ಎಂಬ ಪಾಶುರವು ಪಿಳ್ಳೈಯುರಂಗಾವಿಲ್ಲಿ ದಾಸರು ಶ್ರೀಮದ್ರಾಮಾನುಜಾಚಾರ್ಯರ ಸಮಕಾಲದಲ್ಲಿ ಹೇಳಿದ ಪಾಶುರವಾದಾಗ್ಯೂ ಭಗವದ್ರಾಮಾನುಜಾಚಾರ್ಯರ ಅವರಾವತಾರವಾಗಿ, ಭಗವದ್ರಾಮಾನುಜ ದರ್ಶನ ಪ್ರವರ್ತಕರಾಗಿ, ಭಗವದ್ವಿಶೇಷ ಕಲಾಕ್ಷ ಪಾತ್ರರಾಗಿ, ಶ್ರೀರಂಗನಾಥ ದೇವರಿಗೆ ಆಚಾರ್ಯಸ್ಥಾನದಲ್ಲಿದ್ದ ಮಣವಾಳಮಾಮುನಿಗಳ ಪರ್ಯಂತವಾಗಿ ಅನ್ವಯಿಸುವುದೆಂದು ಈ ದರ್ಶನಸ್ಥಾಪಕರು ಅಭಿಪ್ರಾಯಪಟ್ಟಿರುವರು. ಭಗವದ್ರಾಮಾನುಜಾಚಾರ್ಯರಲ್ಲಿ ಕೇವಲ ಚರಣಪದಚಿತ್ತಪರತಂತ್ರರಾಗಿ "ಶ್ರೀರಾಮಾನುಜಾಂಘ್ರಿ ಜಲಜದ್ವಯ ನಿತ್ಯಸೇವಾ ಪ್ರೇಮಾವಿಲಾಶಯ ಪರಾಂಕುಶ ಪಾದಭಕ್ತಂ" (ಯತಿ. ವಿಂ. 1) ಎಂದು ಆರಂಭಿಸಿ "ಯತಿರಾಜ ದಯಾಂಬುರಾಶೇ ಅನನ್ಯ ಶರಣೋಭವತೀತಿಮತ್ವಾ" (ಯತಿ. ವಿಂ. 20) ಎಂದೂ "ಎಂದೈ ತಿರುವಾಯ್‌ಮೊಳಿಪ್ಪಿಳ್ಳೈಯಿನ್ನರುಳಾಲ್, ವಂದ ಉಪದೇಶ ಮಾರ್ಗತ್ತೈ ಚ್ಚಿಂತೈಶೈಯ್ದು। ಪಿನ್ನವರುಂ ಕರ್ಕ ಉಪದೇಶಮಾಯ್ ಪೇಶುಕಿನ್ರೇನ್" (ಉ. ರ. ಮಾ. 1) ಎಂದು ಆರಂಭಿಸಿ "ಇಂದ ಉಪದೇಶ

ರತ್ತಿನಮಾಲೈ ತನ್ನೈ, ಶಿಂದೈತನ್ನಿಲ್ ನಾಳುಂ ಶಿನ್ತಿಪ್ಪಾರ್–ಎಂದ ಯತಿರಾಜರಿನ್ನ ರುಳುಕ್ಕೆನ್ನುಮಿಲ ಕ್ಕಾಕಿಚ್ಚಡಿರಾಕವಾಳ್ತಿಡುವಾರ್‌ತಾಂ" ಎಂದೂ "ವಾಳಿಯತಿರಾಶನ್, ವಾಳಿಯತಿರಾಶನ್, ವಾಳಿಯತಿರಾಶನೆನ್ನು ವಾಳ್ತುವಾರ್–ವಾಳಿಯೆನವಾಳ್ತುವಾರ್–ವಾಳಿಯೆನವಾಳ್ತುವಾರ್–ತಾಳಿಣೈಯಿಲ್ ವಾಳ್ತುವಾರ್ ವಿಣ್ಣೋರ್‌ತಲೈ (ಆರ್ತಿ ಪ್ರ) ಎಂದು ಆರಂಭಿಸಿ "ತಂದೈನಟ್ರಾಯ್ ತಾರಂ ತನಯರ್‌ಪೆರುಶೆಲ್ವಂ ಎನ್ರೆನುಕ್ಕುನೀಯೇ ಯತಿರಾಶಾ" (ಆರ್ತಿ ಪ್ರ) ಎಂದೂ, "ಇಂದ ಉಯಿರ್ಕೆಲ್ಲಾಂ ವುರುವಂ ನೀಯೇ ಯತಿರಾಶಾ॥ ನಿಲ್ಲಾನದುಂಡೋ ವೆನ್ನೆಂಜು (ಆರ್ತಿ 8) ಎಂದೂ, "ತೆನ್ನರಂಗರ್ ತಮಕ್ಕಾವೋ, ದೇವಿಯಾರ್‌ಕಟ್ಕಾವೋ, ಶೇನೈಯಾರ್‌ಕೋನ್ ಮುದಲಾನ ಶೂರಿಯೊರ್‌ಕಟ್ಕಾವೋ–ಮನ್ನಿಯಮಾಶೀರ್‌ಮಾರನ್ ಅರುಳ್‌ಮಾರಿ ತನಕ್ಕಾವೋ–ಮಟ್ರುಮುಳ್ಳ ದೇಶಿಕರ್‌ಕಳ್ ತಂಗಳುಕ್ಕಾವೋ–ಎನ್ನುಡೈಯ ಪಿಳ್ಳೈಪೊರುಕ್ಕ ಯಾವರುಕ್ಕುಂ ಮುಡಿಯುಂ–ಯತಿರಾಶಾ। ಉನಕ್ಕಿನ್ರಿಯಾನೊರುವನು ಕ್ಕಾಕೇನ್–ಉನ್ನರುಳಾಲೆನಕ್ಕು ಶಿಂದನ್ನೈಯುಂ ಉಂಡಾಕ್ಕಿ ಒಳಿವಿಶುಂಬು ಲಡಿಯೇನ್ನೈಯೊರುಪಡುತ್ತು ಲಿಶೈವಿನ್ದೇನ್" (ಆರ್ತಿ 26) ಎಂದೂ ಇತ್ಯಾದಿ ಪ್ರಬಂಧಗಳ ಮುಖೇನ ಇದೇ ಶ್ರೀವೈಷ್ಣವಾಚಾರ ನಿಷ್ಕರ್ಷೆಯನ್ನು ರಾಮಾನುಜ ದರ್ಶನಸ್ಥರಿಗೆಲ್ಲಾ ವಿಶದವಾಗಿ ಶ್ರೀಮಣವಾಳಮಾಮುನಿಗಳು ಉಪದೇಶಿಸಿರುವುದರಿಂದ "ಕುನ್ರಮೆಡುತ್ತಾನಡಿಶೇರಿ ಇರಾಮಾನುಶನ್" ಎಂಬ ಪಾಶುರವು ಸಂಪ್ರದಾಯ ಕ್ರಮದಲ್ಲಿ ಈ ಮಣವಾಳ ಮಾಮುನಿಗಳವರೆಗೂ ಅನ್ವಯಿಸುತ್ತದೆ ಎಂಬುವುದೇ ಸತ್ಸಂಪ್ರದಾಯ ಪರಂಪರಾನುಗತವಾದ ಸಿದ್ಧಾನ್ತವು

ಈ ಸಿದ್ಧಾನ್ತದ ಉತ್ತೇಜನಕ್ಕಾಗಿ ಶ್ರೀ ಮಣವಾಳ ಮಾಮುನಿಗಳವರು ಮಾಡಿರುವ ಇನ್ನೂ ಹೆಚ್ಚಾದ ಉಪಕಾರಗಳು ಯಾವುವೆಂದರೆ—ನಮ್ಮ ಸಂಪ್ರದಾಯ ಗ್ರಂಥಗಳಾದ ರಹಸ್ಯತ್ರಯ, ತತ್ತ್ವತ್ರಯ, ಶ್ರೀವಚನ ಭೂಷಣ, ಆಚಾರ್ಯಹೃದಯ, ಜ್ಞಾನಸಾರ ಮತ್ತು ಪ್ರಮೇಯಸಾರಗಳೆಂಬ ಗ್ರಂಥಗಳಿಗೆ ವ್ಯಾಖ್ಯಾನವನ್ನು ಮಾಡಿರುವರು "ತಿರುಪ್ಪಲ್ಲಾಂಡಿ" ನಿಂದ ಆರಂಭಿಸಿ "ಶೆನ್ನಿಯೋಂಗು" ಎಂಬ ವರೆಗೂ ಇರುವ "ಪೆರಿಯಾಳ್ವಾರ್ ತಿರುಮೊಳಿ" ಯ ನಲವತ್ತು (40) ಪಾಶುರಗಳಿಗೆ ಮಾತ್ರ "ಪೆರಿಯವಾಚ್ಚಾನ್ ಪಿಳ್ಳೈ" ಯವರ ವ್ಯಾಖ್ಯಾನವಿದ್ದು ಲುಪ್ತವಾಗಿಹೋಗಿದ್ದ ಉಳಿದ ನಾನ್ನೂರು (400) ಪಾಶುರಗಳಿಗೆ ಮಣವಾಳಮಾಮುನಿಗಳು ವ್ಯಾಖ್ಯಾನ ಮಾಡಿರುವರು "ಪ್ರಪನ್ನಗಾಯತ್ರಿ" ಯೆಂದು ಸುಪ್ರಸಿದ್ಧವಾದ "ಇರಾಮಾನುಶ ನೂಟ್ರಂದಾದಿ" ಗೆ ವ್ಯಾಖ್ಯಾನವನ್ನು ಮಾಡಿರುವರು "ದೀರ್ಘಶರಣಾಗತಿ" ಯೆಂದು ಪ್ರಸಿದ್ಧವಾದ "ತಿರುವಾಯ್‌ಮೊಳಿ" ಯ ಈಡಿಗೆ ಅವಶ್ಯಕವಾದ "ಪ್ರಮಾಣತ್ತಿರಟ್ಟು" ಎಂಬ ಸರ್ವಶಾಸ್ತ್ರ ಸಾರತಮವಾದ ಗ್ರಂಥವನ್ನು ಮಾಡಿ ಅದರಿಂದ ಈ ದರ್ಶನದಲ್ಲಿ ಆಸಕ್ತರಾದವರಿಗೆ "ನಾಲಾಯಿರ ದಿವ್ಯ ಪ್ರಬಂಧ" ದ ವ್ಯಾಖ್ಯಾನ ಶಕ್ತಿಯುಂಟಾಗುವಂತೆ

ಮಾಡಿರುವರು. ಭಗವದ್ಗೀತೆಗೆ ಸಂಗ್ರಹವಾಗಿ ಒಂದು ವ್ಯಾಖ್ಯಾನವನ್ನು ಮಾಡಿರುವರು ಈ ರೀತಿಯಾದ ಮಹೋಪಕಾರಗಳಿಂದ ಪ್ರಮಾಣ ಪರತಂತ್ರರಾದವರಿಗೆ ಶ್ರೀ ಮಣವಾಳಮಾಮುನಿಗಳಲ್ಲಿ ಆಚಾರ್ಯ ಪ್ರತಿಪತ್ತಿಯುಂಟಾಗುವುದಕ್ಕೆ ಸಾಕಾದಷ್ಟು ಪ್ರಮಾಣಗಳಿವೆ.

ಈ ಮಣವಾಳಮಾಮುನಿಗಳೇ ತತ್ಸಮಕಾಲೀನರಲ್ಲಿ ಸದಾಚಾರ್ಯೋತ್ತಮರೆಂಬುವುದಕ್ಕೆ ಆಚಾರ್ಯಸೂಕ್ತಿಗಳು ಅನೇಕವಾಗಿರುವುವು.

ನಿರವಧಿ ನಿಗಮಾನ್ತ ವಿದ್ಯಾನಿಷದ್ಯಾನವದ್ಯಾಶಯಾನ್ ।
ಯತಿಪತಿಪದಪದ್ಮ ಬಂಧಾನುಬಂದಾನು ಸಂಧಾಯಿನಃ ।
ವರವರಮುನಿವರ್ಯ ಸಂಬಂಧಿ ಸಂಬಂಧಿ ಸಂಬಂಧಿನಃ ।
ಪ್ರತಿದಿನ ಮನುಭೂಯ ಭೂಯೋನುಭೂಯಾಸಮಾಯಾಸಭೂಃ ॥

(ವರ–ವರ–ಮು–ಶ 101)

ಮಣವಾಳಮಾಮುನಿವನ್ ಪೊನ್ನಡಿಯಾಂ ಶೆಂಗಮಲ ಪ್ಪೋದುಕಳ್ಳೆ ।
ಉನ್ನಿಚ್ಚಿರತ್ತಾಲೇ ತಿಂಡುವೆಂಡಪ್ಪಾದುಡೈಯವೇದಿಯರ್ ಕೋನ್ ।
ಪಾದತ್ತೈಯುಣನ್ನು್ದ ಪಣಿನ್ದು ॥___

ಇತ್ಯಾದಿ ಪ್ರಮಾಣರೀತ್ಯಾ ಮಣವಾಳಮಾಮುನಿಗಳನ್ನು ಆಶ್ರಯಿಸಿದವರಿಗೆ ಮೋಕ್ಷವು ಕರತಲಾಮಲಕ ವಾಗುವುದರಲ್ಲಿ ಯಾವ ಅಭ್ಯಂತರವೂ ಇಲ್ಲ.

ಭಗವದ್ರಾಮಾನುಜಾಚಾರ್ಯರ ಕಾಲಾನಂತರ ಶ್ರೀವೈಷ್ಣವರಿಗೆಲ್ಲಾ ಕೆಲವು ಕಾಲ ಆಚಾರ್ಯ ಪರಂಪರೆಯು ಒಂದೇ ವಿಧವಾಗಿ ನಡೆದುಬಂದು ಅನಂತರ ತೆನ್ಕಲೈ, ವಡಕಲೈಗಳೆಂಬ ಎರಡು ಸಂಪ್ರದಾಯಗಳಾದುವು "ತೆನ್ಕಲೈ" ಸಂಪ್ರದಾಯಕ್ಕೆ ಶ್ರೀ ಮಣವಾಳಮಾಮುನಿಗಳೂ "ವಡಕಲೈ" ಸಂಪ್ರದಾಯಕ್ಕೆ ಶ್ರೀಮಾನ್ ನಿಗಮಾನ್ತ ದೇಶಿಕರವರೂ ಪ್ರಧಾನ ಆಚಾರ್ಯರಾಗಿ ನಿಂತು ಈ ವರಿವಿಗೂ ಈ ಎರಡು ಸಂಪ್ರದಾಯಗಳೂ ನಡೆದು ಬರುತ್ತಿರುವುವು. ಈ ಎರಡು ಸಂಪ್ರದಾಯಗಳಲ್ಲಿ ಅಭಿಪ್ರಾಯ ಭೇದದಿಂದ ಕೆಲವು ಅಂಶಗಳಲ್ಲಿ ವ್ಯತ್ಯಾಸಗಳು ಕಂಡು ಬಂದಾಗ್ಯೂ ಇವರಿಬ್ಬರಿಗೂ ಶ್ರೀಮದ್ರಾಮಾನುಜ ಸಿದ್ಧಾನ್ತವೇ ಪ್ರಧಾನವಾಗಿರುವುದು.

ಶ್ರೀಮದ್ವರವರಮುನಿಗಳಂತೆಯೇ ವಡಗಲೆ ಸಂಪ್ರದಾಯ ಸ್ಥಾಪಕರಾದ ಶ್ರೀಮನ್ನಿಗಮಾನ್ತ ದೇಶಿಕರು ಭಗವದ್ರಾಮಾನುಜಾಚಾರ್ಯರಲ್ಲಿ ವಿಶೇಷ ಪ್ರತಿಪತ್ತಿ

ಯನ್ನು ಮಾಡಿ ಶ್ರೀವೈಷ್ಣವ ಸಂಪ್ರದಾಯವನ್ನು ಸ್ಥಿರೀಕರಿಸಿದರು. ಇವರು ಘಂಟಾವತಾರರೆಂದು ಪ್ರಸಿದ್ಧರಾಗಿ ವೇದಾನ್ತ ಮತ್ತು ರಾಮಾನುಜ ಸಿದ್ಧಾನ್ತಗಳಲ್ಲಿ ಅಪ್ರತಿಮ ಪಾಂಡಿತ್ಯವನ್ನು ಪಡೆದು, ಭಗವದ್ರಾಮಾನುಜಾಚಾರ್ಯರಂತೆಯೇ ಇತರ ಸಿದ್ಧಾನ್ತಗಳನ್ನು ಬಹುಮುಖವಾಗಿ ಖಂಡಿಸಿ "ಸರ್ವತಂತ್ರಸ್ವತಂತ್ರ"ರೆಂಬ ಬಿರುದನ್ನು ಪಡೆದರು. ಮೂವತ್ತೆರಡು ರಹಸ್ಯಗಳನ್ನು ಅವರ ಶಿಷ್ಯಪ್ರಶಿಷ್ಯರ ಉದ್ಧಾರಕ್ಕಾಗಿ ಉಪದೇಶಿಸಿದರು. ಇನ್ನೂ ಇವರು ರಚಿಸಿರುವ ಗ್ರಂಥಗಳು ಅಸಂಖ್ಯಾತಗಳಾಗಿರುವುವು. ಇವರ ಕೀರ್ತಿಯು ದಿಗಂತಗಳಲ್ಲಿ ಆಗಿನ ಕಾಲಕ್ಕೆ ಪ್ರಖ್ಯಾತವಾಗಿದ್ದು ಈಗಲೂ ಪ್ರಖ್ಯಾತಿಯಲ್ಲಿರುವುದು.

# ಮೂರನೆಯ ಅಧ್ಯಾಯ

ತಿರುವಾಯ್‌ಮೊಳಿಯಲ್ಲಿ ಹೇಳಿರುವ ಶ್ರೀ ರಾಮಾನುಜಾಚಾರ್ಯರ ಭವಿಷ್ಯ ಅವತಾರ ಮತ್ತು ಅವರ ವೈಭವ ಮತ್ತು ಭಾಗವತ ನಿಷ್ಠೆಯ ವಿಷಯಗಳು :—

ಆಚಾರ್ಯ ಪರಂಪರಾಪ್ರಾಪ್ತವಾಗಿ ಭಗವದ್ಭಾಗವತ ಪಾರತಂತ್ರ್ಯ, ಕೈಂಕರ್ಯಾದಿ ರೂಪವಾದ ಶ್ರೀವೈಷ್ಣವಾಚಾರಕ್ಕೆ "ದ್ರವಿಡೋಪನಿಷತ್ತೆ"ಂದು ಪ್ರಖ್ಯಾತವಾದ "ನಾಲಾಯಿರ ದಿವ್ಯ ಪ್ರಬಂಧವೂ, ಭಕ್ತಿ ಪ್ರಪತ್ತಿಗಳನ್ನು ಪ್ರತಿಪಾದಿಸುವ ವೇದಾನ್ತಾದಿ ಶಾಸ್ತ್ರಗಳೂ ಮುಖ್ಯ ತಳಹದಿಗಳಾಗಿವೆ ವಸ್ತುತಃ ಈ ಉಭಯವೇದಾನ್ತಗಳೂ ಒಂದೇ ಆದಾಗ್ಯೂ "ದ್ರವಿಡೋಪನಿಷತ್ತು" ವೇದಾನ್ತಸಾರವನ್ನು ವಿಶದವಾಗಿ ಹೇಳಿರುವುದರಿಂದಲೂ, ಮಂದಮತಿಗಳಿಗೂ ತಿಳಿಯುವಂತೆ ಸುಲಭಶೈಲಿಯಲ್ಲಿ ದ್ರಾವಿಡ ಭಾಷೆಯಲ್ಲಿ ಹೇಳಿರುವುದರಿಂದಲೂ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ಜಾತಿಗಳ ಪುರುಷರಿಗೆ ಮಾತ್ರ ಅಧಿಕಾರವಿರುವ ವೇದದಂತಲ್ಲದೆ ಸ್ತ್ರೀ ಶೂದ್ರಾದಿಗಳಿಗೂ ಈ ದ್ರವಿಡವೇದಾಭ್ಯಾಸದಲ್ಲಿ ಅಧಿಕಾರ ವಿರುವುದರಿಂದಲೂ ಮತ್ತು ಕೇವಲ ಮೋಕ್ಷ ಪ್ರತಿಪಾದಕವಾದ ಶಾಸ್ತ್ರವಾದುದರಿಂದಲೂ ಈ ದ್ರವಿಡೋಪನಿಷತ್ತಿಗೆ ವೇದಗಳಿಗಿಂತಲೂ ಅಧಿಕವಾದ ಪ್ರಾಮುಖ್ಯತೆಯು ಕೊಡಲ್ಪಟ್ಟಿದೆ. ನಮ್ಮಾಳ್ವಾರ್‌ರವರ ಶಿಷ್ಯರಾದ ಮಧುರಕವಿಯಾಳ್ವಾರ್‌ರ ಕಾಲದಲ್ಲಿ ನಮ್ಮಾಳ್ವಾರ್‌ರ ತಿರುವಾಯ್‌ಮೊಳಿ ಗ್ರಂಥವನ್ನು ಅರ್ಥಸಹಿತವಾಗಿ ಪಾರಾಯಣ ಮಾಡಿ ತನ್ನಿಷ್ಠರಾದವರಿಗೆ ಅದೇ ಜನ್ಮದ ಅಂತ್ಯದಲ್ಲಿ ಮೋಕ್ಷವು ಸಿದ್ಧಿಸುತ್ತಿತ್ತೆಂಬ ಪ್ರತೀತಿಯೂ ಇದೆ

"ಅರಿಯಕಟ್ಟುರುವಲ್ಲಾರ್ ವೈಟ್ಟಣವರ್" (ತಿ ವಾಯ್ 5–5–11) ಎಂದು ತಿರುವಾಯ್‌ಮೊಳಿ ಗ್ರಂಥವನ್ನು ಅಭ್ಯಾಸ ಮಾಡುವವರು ಪರಮ ಭಾಗವತೋತ್ತಮರಾದ ವೈಷ್ಣವರೆಂದು ಎಂದರೆ–"ಅರ್ಥಪಂಚಕತತ್ತ್ವಜ್ಞಾ ಮಹಾಭಾಗವತಾಸ್ಸ್ಮೃತಾಃ" ಎಂಬ ಶಾಸ್ತ್ರವಾಕ್ಯದಂತೆ ಅರ್ಥಪಂಚಕ ಜ್ಞಾನಪ್ರದವಾದ ಈ ತಿರುವಾಯ್‌ಮೊಳಿ ಗ್ರಂಥವನ್ನು ಅಭ್ಯಾಸ ಮಾಡುವವರು ಪರಮಪದದಲ್ಲಿರುವ ನಿತ್ಯಸೂರಿಗಳಿಗೆ ಸಮಾನರೆಂದು ನಮ್ಮ ಪೂರ್ವಾಚಾರ್ಯರುಗಳು ವ್ಯಾಖ್ಯಾನ ಮಾಡಿರುವರು.

ಭಗವದ್ದತ್ತ ದಿವ್ಯಜ್ಞಾನ ಸಂಪನ್ನರಾದ ಶ್ರೀ ನಮ್ಮಾಳ್ವಾರ್‌ರು ತಮ್ಮ "ತಿರುವಾಯ್‌ಮೊಳಿ" ಪ್ರಬಂಧದ ಮೂಲಕ ಭಗವಂತನಲ್ಲಿ ಭಕ್ತಿ ಪ್ರಪತ್ತಿಗಳನ್ನು ಮಾಡುತ್ತಿದ್ದ

ಕಾಲದಲ್ಲಿ, ಈ ಕಲಿಯುಗದ ಪ್ರಾಬಲ್ಯದಿಂದ ಲೋಕವು ನಾಶವಾಗುವ ಸಂದರ್ಭವನ್ನು ಕಂಡು ವ್ಯಾಕುಲಚಿತ್ತರಾಗಿ ಚಿಂತಿಸುತ್ತಿದ್ದಾಗ ಮುಂದೆ ಸುಮಾರು ನಾಲ್ಕುಸಾವಿರ (4000) ವರ್ಷಗಳನಂತರ ಸಂಭವಿಸುವ ಭಗವದ್ರಾಮಾನುಜಾಚಾರ್ಯರ ಅವತಾರ ವಿಶೇಷದ ಸಂಗತಿಯೂ ಮತ್ತು ಆ ಶ್ರೀಮದ್ರಾಮಾನುಜಾಚಾರ್ಯರಿಂದ ಕಲಿಪುರುಷನ ಶಕ್ತಿಯು ನಾಶವಾಗಿ ಅಸಂಖ್ಯಾತವಾದ ಜನಸಮೂಹವು ಭಗವದ್ರಾಮಾನುಜಾಚಾರ್ಯರ ಅನುಗ್ರಹದಿಂದ ಶ್ರೀವೈಷ್ಣವ ಭಕ್ತರಾಗಿ ಅವರ ಶಿಷ್ಯವರ್ಗದಲ್ಲಿ ಸೇರಿ ಮುಕ್ತಿಯನ್ನು ಹೊಂದುವ ವಿಷಯುವೂ ಮತ್ತು ಕಲಿಯ ಪ್ರಭಾವವು ನಾಶವಾಗಿ ಕೃತಯುಗದಂತಾಗು ವುದೆಂಬ ವಿಷಯುವೂ ಅವರಿಗೆ ಸಾಕ್ಷಾತ್ಕಾರವಾಯಿತೆಂದೂ, ಅದರ ಫಲವಾಗಿ ತಮ್ಮ ತಿರುವಾಯ್‌ಮೊಳಿಯ ಐದನೆಯ ಶತಕದಲ್ಲಿ "ಕಲಿಯುಂಕೆಡುಂ ಕಂಡುಕೊಳ್ಮಿನ್" (ತಿ ವಾಯ್ 5-2-1) ಎಂಬ ಪಾಶುರದಲ್ಲಿ ತಾವು ಕಂಡು ಅನುಭವಿಸಿದ ವಿಷಯು ವನ್ನು ವಿವರಿಸಿರುವರು.

ಈ ವಿಷಯುವಾಗಿ ಅವರ ಶಿಷ್ಯರಾದ 'ನಾಥಮುನಿಗಳು' ಪ್ರಶ್ನಿಸಲು ನಮ್ಮಾ ಳ್ವಾರ್ರು ಭವಿಷ್ಯದವತಾರವಾದ ಭಗವದ್ರಾಮಾನುಜಾಚಾರ್ಯರ ಅವತಾರದ ವಿಷಯು ವನ್ನು ಸೂಚಿಸಿ ತಾವು ತಮ್ಮ ಜ್ಞಾನಸಮಾಧಿಯಲ್ಲಿ ಕಂಡ 'ಶ್ರೀಮದ್ರಾಮಾನುಜಾ ಚಾರ್ಯರ' ಅರ್ಚಾವಿಗ್ರಹವೊಂದನ್ನು ಮಾಡಿಸಿ, ಅದನ್ನು ನಾದಮುನಿಗಳಿಗೆ ಅನುಗ್ರಹಿಸಿ ಕೊಟ್ಟು ಆ ವಿಗ್ರಹವನ್ನು ಶಿಷ್ಯಪರಂಪರಾ ಕ್ರಮವಾಗಿ ಆರಾಧಿಸಿಕೊಂಡು ಬರುವಂತೆ ಹೇಳಿದರು ಆ ವಿಗ್ರಹವನ್ನು ಶಿಷ್ಯಪರಂಪರಾ ಕ್ರಮದಲ್ಲಿ ನಾಥಮುನಿಗಳು, ಉಯ್ಯ ಕ್ಕೊಂಡಾರ್, ಮಣಕ್ಕಾಲ್‌ನಂಬಿ, ಆಳವಂದಾರ್ ಮತ್ತು ತಿರುಕ್ಕೋಟ್ಟಿಯೂರ್ ನಂಬಿಗಳು ಪರಂಪರೆಯಾಗಿ ಆರಾಧಿಸಿಕೊಂಡು ಬರುತ್ತಿರುವಾಗ ಭಗವದ್ರಾಮಾನುಜಾ ಚಾರ್ಯರು, ತಮ್ಮ ಅವತಾರಾನಂತರ, ತಿರುಕ್ಕೋಟ್ಟಿಯೂರ್ ನಂಬಿಗಳ ಮನೆಗೆ ಬಿಜಯಮಾಡಿದಾಗ ಆ ವಿಗ್ರಹವು ಭಗವದ್ರಾಮಾನುಜಾಚಾರ್ಯರಲ್ಲಿ ಐಕ್ಯವಾಯಿತೆಂದು ಪ್ರತೀತಿಯಿದೆ.

ಆ "ಪೊಲಿಹ ಪೊಲಿಹ" ಎಂಬ ಐದನೆ ಶತಕದಲ್ಲಿ ಶ್ರೀನಮ್ಮಾಳ್ವಾರ್ರವರು ತಮ್ಮ ಕಾಲಾನಂತರ ಅವತರಿಸುವ, ಕಲಿಧ್ವಂಸಕ್ಕೆಕಾರಣರಾದ ಶ್ರೀವೈಷ್ಣವ ಸಮುದಾಯ ವೆಲ್ಲವನ್ನೂ ತಮ್ಮ ಜ್ಞಾನದೃಷ್ಟಿಯಿಂದ ಸಾಕ್ಷಾತ್ಕರಿಸಿದರು ತಮ್ಮ ಕಾಲದಲ್ಲೇ ತಮ್ಮ ದಿವ್ಯ ಚರಣಾರವಿಂದಗಳಲ್ಲಿ ಸಮಾಶ್ರಯಣ ಶಾಲಿಗಳಾಗಿದ್ದ ಶ್ರೀವೈಷ್ಣವಾಗ್ರ ಗಣ್ಯರಾಗಿದ್ದ ಮಧುರಕವಿಯಾಳ್ವಾರ್ರನ್ನೂ, ಅವರಂತೆಯೇ ತಚ್ಚರಣಶರಣರಾದ ಕುಲಶೇಖರಾಳ್ವಾರ್ ಪೆರಿಯಾಳ್ವಾರ್ ಮತ್ತು ತಿರುಮಂಗೈಯಾಳ್ವಾರ್ರವರುಗಳ ಕಾಲದ ಶ್ರೀವೈಷ್ಣವ ಸಂಪತ್ತನ್ನೂ, ತಮ್ಮಿಂದ ದಿವ್ಯಜ್ಞಾನವನ್ನು ಪಡೆದ ಶ್ರೀಮನ್ನಾಥ ಮುನಿಗಳು, ಆಳವಂದಾರ್ ಇವರುಗಳ ಕಾಲದ ಶ್ರೀವೈಷ್ಣವ ಸಂಪತ್ತನ್ನೂ,

ಶ್ರೀಮಧುರಕವಿಗಳಿಗಿಂತಲೂ ಅತ್ಯಂತ ಪ್ರಿಯತಮರಾದ ಮತ್ತು ತಮ್ಮ ಪಾದಗಳಿಗೆ "ರಾಮಾನುಜನ್" ಎಂದೇ ನಿರೂಪಕವಾಗುವಂತೆ ಹೆಸರನ್ನಿಟ್ಟ ಭಗವದ್ರಾಮಾನುಜಾಚಾರ್ಯರ ಕಾಲದ ಶ್ರೀವೈಷ್ಣವ ಸಂಪತ್ಸಮೃದ್ಧಿಯನ್ನೂ, ತಚ್ಛಿಷ್ಯ ಶಿಷ್ಯಸಂಬಂಧಿಗಳಿಂದುಂಟಾದ ಶ್ರೀವೈಷ್ಣವ ಸಂಪತ್ಸಮೃದ್ಧಿಯನ್ನೂ ತಮ್ಮ ದಿವ್ಯಜ್ಞಾನದಿಂದ ಸಾಕ್ಷಾತ್ಕರಿಸಿದರು ಹೀಗೆ ಭವಿಷ್ಯತ್ಕಾಲದಲ್ಲುಂಟಾಗುವ ಅವತಾರ ವಿಶೇಷಗಳನ್ನು ತಮ್ಮ ಕಾಲದಲ್ಲಿಯೇ ಸಾಕ್ಷಾತ್ಕರಿಸಿ ಆ ಸಂದರ್ಭದಲ್ಲಿ ಆ ಶ್ರೀವೈಷ್ಣವ ಸಂಪತ್ಸಮೃದ್ಧಿಯನ್ನು ತಾವೂ ನೋಡಬೇಕೆಂದು ಆಗ ಅವರಲ್ಲಿಗೆ ಆಗಮಿಸಿದ ನಿತ್ಯಸೂರಿಗಳಿಗೂ ಮತ್ತು ಆ ಶ್ರೀವೈಷ್ಣವ ಸಮುದಾಯಕ್ಕೂ ಸೇರಿ ಮಂಗಲಾಶಾಸನವನ್ನು ಮಾಡುವ ನೆಪದಿಂದ

"ಪೊಲಿಹ ಪೊಲಿಹ ಪೊಲಿಹ ಪೋಯಿಟ್ರು ವಲ್ಲುಯಿರ್ ಚ್ಚಾಪಂ।
ನಲಿಯುಂ ನರಕಮುಂನೈನ್ದನ ಮನುಕ್ಕಿನ್ರಿಯಾದೊನ್ರುಮಿಲ್ಲೈ ॥
ಕಲಿಯುಂ ಕೆಡುಂ ಕಂಡುಕೊಳ್ಮಿನ್ ಕಡಲ್‌ವಣ್ಣನ್ ಪೂತಂಗಳ್ ಮಣ್ಮೇಲ್।
ಮಲಿಯಪ್ಪುಗುನ್ದಿಶೈಪ್ಪಾಡಿಯಾಡಿ ಯುೞಿದರಕ್ಕಂಡೋಮ್ ॥
(ತಿವಾಯ್ 5–2–1)

ಎಂದರೆ—ಸರ್ವೇಶ್ವರನ ಅನುಗ್ರಹಕ್ಕೆ ಪಾತ್ರರಾದ ಭಾಗವತರನೇಕರು ಈ ಲೋಕದಲ್ಲಿ ಎಲ್ಲೆಲ್ಲಿಯೂ ಅವತರಿಸಿ ಭಗವಂತನನ್ನು ಹಾಡಿ, ಹಾಡಿ, ನಲಿದಾಡಿ, ನರ್ತಿಸಿ ಕಲಿಯ ಪ್ರಾಬಲ್ಯವನ್ನು ನಾಶಮಾಡುವುದನ್ನು ನೋಡಿದೆನು. ಅವಿದ್ಯಾರೂಪವಾದ ಮಹಾಪಾಪವು ನಾಶವಾಯಿತು ನರಕಗಳು ಬರಿದಾದವು. ಯಮನಿಗೆ ಇನ್ನು ಈ ಲೋಕದಲ್ಲಿ ಯಾವ ಕಾರ್ಯವೂ ಇರುವುದಿಲ್ಲ ಎಂದು ಸಸಂಭ್ರಮದಿಂದ ಹಾಡತೊಡಗಿದನು

ಭಗವದ್ರಾಮಾನುಜಾಚಾರ್ಯರ ಭವಿಷ್ಯದವತಾರ ವಿಷಯವನ್ನು ಶ್ರೀನಮ್ಮಾಳ್ವಾರ್ರು ನಾಲ್ಕುಸಾವಿರ ವರ್ಷಗಳಿಗೆ ಮುಂಚಿತವಾಗಿಯೇ ತಮ್ಮ ದಿವ್ಯಜ್ಞಾನದೃಷ್ಟಿಯಿಂದ ನೋಡಿ ಭಗವಚ್ಛಾಸ್ತ್ರದಲ್ಲಿ ಸೂಚಿಸಿರುವ ಭಗವಂತನ ಆರನೆಯ ಅವತಾರವಾದ 'ಆಚಾರ್ಯಾವತಾರ'ವೇ ಭಗವದ್ರಾಮಾನುಜಾಚಾರ್ಯರೆಂಬುದನ್ನು ಕಂಡುಕೊಂಡು ಮೇಲೆ ಹೇಳಿದ ಪಾಶುರವನ್ನು ಹಾಡಿದರು

ಶ್ರೀಪಾಂಚರಾತ್ರ ಶಾಸ್ತ್ರದಲ್ಲಿ ಭಗವಂತನು ಈ ರೀತಿಯಾಗಿ ಹೇಳಿರುವನು.—

"ಮಮ ಸ್ವರೂಪಂ ಸರ್ವಸ್ಮಾತ್। ಪರಸ್ಯ ಜಗದೀಶಿತುಃ।
ಷಡ್ವಿಧಂ ಪರಿಪೂರ್ಣಂತತ್। ಸೇನೇಶ ಪರಿಪಠ್ಯತೇ।
ಪರತ್ವಂ ವ್ಯೂಹವಿಭವಾ। ವಂತರ್ಯಾಮಿತ್ವ ಮೇವಚ।
ಅರ್ಚಾಽಽಚಾರ್ಯಾವತಾರಾದ್ವಾ। ಷಾಡ್ವಿಧ್ಯಂಮೇ ಪ್ರಕೀರ್ತಿತಂ।

ಪೂರ್ವಸ್ಮಾದಪಿ ಪೂರ್ವಸ್ಮಾತ್। ಸುಲಭೋಹ್ಯುತ್ತರೋತ್ತರಃ।
ತೇಷ್ವಾಚಾರ್ಯಾವತರಣೇ। ಕಾರುಣ್ಯಂ ಪರಿಪೂರಿತಂ।
ಜ್ಞಾನಾದಿಗುಣ ತಸ್ತತ್ರ। ವಿಶೇಷಾಧೀಷ್ಟಿತಿರ್ಭವೇತ್।
ಆಸನ್ನತ್ವಾದ್ದಯಾ ಉತ್ಸ್ವಾತೇ। ಜ್ಞಾನಿತ್ವಾದ್ಗುರು ಭಾವತಃ।
ಚರಮಸ್ಯಾವತಾರಸ್ಯ। ಗುರುರೂಪೇಣ ಮೇನದಾ।
ಪ್ರಾಪ್ಯತ್ವ ಪ್ರಾಪಕತ್ವೇದೇ। ಸ್ವನಿಷ್ಠೇನ ಗುಣಾನ್ವಿತೇ।
ತಸ್ಮಾತ್ತತ್ಪಾದಯುಗಳಂ। ಶರಣಂ ಮೋಕ್ಷಕಾಂಕ್ಷಿಣಾಂ॥ (ಸಾತ್ವಿತಸಂಹಿತೆ)

ಎಂದು ಭಗವಂತನೇ ತನ್ನ ಆಚಾರ್ಯಾವತಾರ ವೈಭವವನ್ನು ಪ್ರಕಾಶಪಡಿಸಿರುತ್ತಾನೆ

ಆಚಾರ್ಯಾವತರಣೇ ಕಾರುಣ್ಯಂ ಪರಿಪೂರಿತಂ।
ತಸ್ಮಾತ್ತತ್ಪಾದಯುಗಳಂ ಶರಣಂ ಮೋಕ್ಷಕಾಂಕ್ಷಿಣಾಂ॥

ಎಂಬ ಮೇಲಿನ ಶ್ಲೋಕದ ವಾಕ್ಯಗಳು ಸರ್ವರಿಗೂ ಗಮನಾರ್ಹವಾಗಿರುವುದು. ಇದೇ ಪಾಂಚರಾತ್ರ ಶಾಸ್ತ್ರದಲ್ಲಿ ಭಗವಂತನು

ಮದ್ಭಕ್ತಾ ಜ್ಞಾನಪೂರ್ಣಾಯೇ। ಭವಿಷ್ಯನ್ತಿಕಲೌಯುಗೇ।
ತ್ರಿದಂಡಿನೋಭಿಮಾನಾನ್ಯೇ। ತೇಸರ್ವೇ ಗುರುರೂಪಿಣಃ॥ (ಪಾಂಚರಾತ್ರ)

ಎಂದು ಹೇಳಿರುವನು ಈ ಶ್ಲೋಕವನ್ನು "ಯಾದವಗಿರಿ ಮಹಾತ್ಮ್ಯ"ದಲ್ಲಿ ಹೇಳಿರುವ

ಅನನ್ತಃ ಪ್ರಥಮಂ ರೂಪಂ। ಲಕ್ಷ್ಮಣಶ್ಚತತಃ ಪರಃ।
ಬಲಭದ್ರಸ್ತೃತೀಯಸ್ತು। ಕಲೌಕಶ್ಚಿದ್ಭವಿಷ್ಯತಿ॥

ಎಂಬ ಶ್ಲೋಕದೊಡನೆ ಹೋಲಿಸಿದರೆ ಕಲಿಯುಗದಲ್ಲಿ ಅವತರಿಸಿದ ಭಗವದ್ರಾಮಾನುಜಾಚಾರ್ಯರ ಅವತಾರ ವಿಷಯವು ಬಹು ಪೂರ್ವದಲ್ಲೇ ಶಾಸ್ತ್ರಗಳಲ್ಲಿ ಹೇಳಿರುವುದಾಗಿ ತಿಳಿದುಬರುವುದು. ಆದ್ದರಿಂದ

ತದ್ವಿಜ್ಞಾನಾರ್ಥಂಸಗುರುಮೇವಾಭಿಗಚ್ಛೇತ್ಸಮಿತ್ಪಾಣಿಃ
ಶ್ರೋತ್ರಿಯಂ ಬ್ರಹ್ಮನಿಷ್ಠಂ (ಮುಂ ಉ 1–2–12)

"ಆಚಾರ್ಯದೇವೋಭವ" "ದೇವಮಿದಾಚಾರ್ಯಮುಪಾಸೀತ' "ಗುರುರೇವ ಪರಂ ಬ್ರಹ್ಮ" "ಆಚಾರ್ಯಸ್ಸ ಹರಿಃಸಾಕ್ಷಾತ್ ಚರರೂಪಿನ ಸಂಶಯಃ" ಇತ್ಯಾದಿ ಸದಾಚಾರ್ಯ ವೈಭವ ವಿಶಿಷ್ಟ ಶ್ರುತಿ, ಸ್ಮೃತೀತಿಹಾಸ ಪುರಾಣಾದಿ ವಾಕ್ಯಗಳೆಲ್ಲವೂ "ರಾಮಾನುಜಾರ್ಯ ಮರ್ಯಾಣಾಂ ಚೂಡಾಮಣಿ ಮಹರ್ನಿಶಂ" (ಗದ್ಯತ್ರಯಂ) ಎಂಬಂತೆ ವೈದಿಕೋತ್ತಮರಾದ ಶ್ರೀರಾಮಾನುಜಾಚಾರ್ಯರಲ್ಲೇ ನೆಲೆಯಾಗಿ ನಿಲ್ಲುವುದು ಇದಕ್ಕೆ 'ಗುರುಪರಂಪರಾ ಪ್ರಭಾವ'ವೆಂಬ ಗ್ರಂಥದಲ್ಲಿರುವ ಕೆಲವು ಅಂಶಗಳು ಗಮನಾರ್ಹಗಳು. ಅವು ಯಾವುವೆಂದರೆ

ಶ್ರೀರಂಗದ ಭಗವಾನ್ ಶ್ರೀರಂಗನಾಥನು, ರಾಮಾನುಜಾಚಾರ್ಯರು ಸ್ಥಾಪಿಸಿದ ಸಿದ್ಧಾಂತಕ್ಕೆ "ಎಂಬೆರುಮಾನಾರ್ ದರ್ಶನಂ", ಎಂದರೆ "ರಾಮಾನುಜ ಸಿದ್ಧಾಂತ" ಎಂದು ಹೆಸರಿಟ್ಟನು.

ಕಂಚಿ ವರದರಾಜ ದೇವರು ರಾಮಾನುಜಾಚಾರ್ಯರ ಗುರುವಾದ ಯಾದವ ಪ್ರಕಾಶರನ್ನು ಕುರಿತು 'ನಮ್ಮ ರಾಮಾನುಜರನ್ನು ಒಂದು ಪ್ರದಕ್ಷಿಣವನ್ನು ಮಾಡಿದರೆ ಅದು ಭೂಪ್ರದಕ್ಷಿಣೆ ಮಾಡುವುದಕ್ಕಿಂತಲೂ ಶ್ರೇಷ್ಠವು" ಎಂದು ಹೇಳಿದನು

'ಅಳಕಿಯ ವರದರ್' ಎಂಬ ದೇವರ ಸನ್ನಿಧಿಯಲ್ಲಿ 'ಕಿಡಾಂಬಿಯಾಚ್ಚಾನ್' ಎಂಬ ಶ್ರೀರಾಮಾನುಜಾಚಾರ್ಯರ ಶಿಷ್ಯರು ದೇವರನ್ನು ಸ್ತೋತ್ರಮಾಡುವ ಕಾಲದಲ್ಲಿ

ಅಪರಾಧ ಸಹಸ್ರ ಭಾಜನಂ ಪತಿತಂ ಭೀಮಭವಾರ್ಣವೋದರೆ।
ಅಗತಿಂ ಶರಣಾಗತಿಂಹರೇ । ಕೃಪಯಾ ಕೇವಲ ಮಾತ್ಮಸಾತ್ಕುರು ॥
(ಸ್ತೋ ರತ್ನ-48)

ಎಂಬ ಶ್ಲೋಕವನ್ನು ಹಾಡಿದಾಗ ಆದೇವರು ಅವರನ್ನು ಕುರಿತು "ನಮ್ಮಿರಾಮಾನು ಶನೈಯುಡೈಯನಾಯಿರುನ್ದು 'ಅಗತಿಂ' ಎನ್ರು ಶೊಲ್ಲಪ್ಪೆರಾಯ್" ಎಂದರೆ ನಮ್ಮ ಈ ರಾಮಾನುಜರನ್ನು ಗುರುವಾಗಿ ಪಡೆದೂ 'ಅಗತಿಂ' (ಎಂದರೆ ದಿಕ್ಕಿಲ್ಲದವನು) ಎಂದು ಹೇಳುವುದು ಸರಿಯಲ್ಲ ಎಂದು ಹೇಳಿದುದಾಗಿ ಪ್ರತೀತಿಯಿದೆ. ಇದರಿಂದ ಭಗವಂತನಂತೆಯೇ ಶ್ರೀರಾಮಾನುಜಾಚಾರ್ಯರಿಗೂ ಮೋಕ್ಷಪ್ರದತ್ವ ಶಕ್ತಿ ಇರುವುದೆಂದು ಹೇಳಿದಹಾಗಾಯಿತು

ಮತ್ತು ಈ ದರ್ಶನ ಸ್ಥಾಪಕರಾದ ಆಚಾರ್ಯರುಗಳಿಗೂ ಮತ್ತು ಅವರ ಶಿಷ್ಯರುಗಳಿಗೂ ಆರಾಧನೆಯ ರೂಪವಾದ ಭಗವದ್ವಿಗ್ರಹದೊಡನೆ ಭಗವದ್ರಾಮಾನುಜಾಚಾರ್ಯರ ಅರ್ಚಾ ವಿಗ್ರಹವೂ ಇರಬೇಕೆಂಬ ನಿಯಮವು ಏರ್ಪಟ್ಟು ಅದರಂತೆ ಶ್ರೀರಂಗ ತಿರುಪತಿ, ಕಾಂಚೀಪುರ, ಮೇಲುಕೋಟೆ ಇತ್ಯಾದಿ ಇನ್ನೂ ಇತರ ದಿವ್ಯದೇಶಗಳಲ್ಲಿ ಭಗವದ್ರಾಮಾನುಜಾಚಾರ್ಯರ ಅರ್ಚಾವಿಗ್ರಹವು ಸ್ಥಾಪಿತವಾಗಿ ಈಗಲೂ ಆರಾಧಿಸಲ್ಪಡುತ್ತಿದೆ

ಭಗವದ್ರಾಮಾನುಜಾಚಾರ್ಯರು ಒಂದು ದಿನ ಶ್ರೀರಂಗದಲ್ಲಿ ಶ್ರೀರಂಗನಾಥ ದೇವರನ್ನು ದರ್ಶಿಸುತ್ತಿದ್ದಾಗ ಭಗವಂತನು ಅವರನ್ನು ಕುರಿತು "ಉಭಯ ವಿಭೂತ್ಯೈಶ್ವರ್ಯತ್ತೈಯುಂ ಉಮಕ್ಕುಂ ಉಮ್ಮುಡೈಯಾರ್ಕುಂ ತಂದೋಮ್," ಎಂದರೆ, ನಿಮಗೂ ಮತ್ತು ನಿಮ್ಮ ಸಂಬಂಧವನ್ನು ಪಡೆದವರಿಗೂ ಇಹಲೋಕ ಮತ್ತು ಪರಲೋಕದ ಐಶ್ವರ್ಯಗಳೆಲ್ಲವನ್ನೂ ಅನುಗ್ರಹಿಸಿರುವೆನು—ಎಂದು ಹೇಳಿದನು. ಮತ್ತೊಂದು ಸಂದರ್ಭದಲ್ಲಿ ಭಗವದ್ರಾಮಾನುಜಾಚಾರ್ಯರು ತಿರುಪತಿ ಬೆಟ್ಟದಮೇಲೆ ಶ್ರೀನಿವಾಸ

ದೇವರನ್ನು ಸೇವಿಸುತ್ತಿದ್ದಾಗ ಶ್ರೀನಿವಾಸನು ಇವರನ್ನು ಕುರಿತು 'ಉಮಕ್ಕುಂ ಉಮ್ಮು ಡೈಯಾರ್ಕುಂ ಉಭಯ ವಿಭೂತ್ಯೈಶ್ವರ್ಯತ್ತೈಯುಂ ತಂದೋಮೆನ್ರು ನಮ್ ತೆರುಕ್ಕು ವಿಟ್ಟಿಲೇ ಶೊನ್ನೋಮೇ," ಎಂದರೆ—ನಿಮಗೂ ಮತ್ತು ನಿಮಗೆ ಸೇರಿದವರಿಗೂ ಉಭಯ ವಿಭೂತ್ಯೈಶ್ವರ್ಯಗಳನ್ನೂ ಅನುಗ್ರಹಿಸಿರುವೆನೆಂದು ನಮ್ಮ ದಕ್ಷಿಣ ದೇಶದ (ಎಂದರೆ ಶ್ರೀರಂಗದ) ದೇವಸ್ಥಾನವಲ್ಲಿ ಹೇಳಿರುವೆನಲ್ಲವೆ—ಎಂದು ಹೇಳಿರುವುದಾಗಿ ಪ್ರತೀತಿಯಿದೆ.

ನಮ್ಮಾಳ್ವಾರ್ರು ಹಾಡಿದ ತಮ್ಮ "ಪೋಲಿಹ, ಪೋಲಿಹ" ಶತಕದಲ್ಲಿ ಭವಿಷ್ಯದ ಅವತಾರರಾದ ಭಗವದ್ರಾಮಾನುಜಾಚಾರ್ಯರ ಅವತಾರ ವಿಷಯದ ಜೊತೆಗೆ "ಚರಮ ಪರ್ವನಿಷ್ಠೆ"ಯಾದ ಭಾಗವತ ದಾಸ್ಯದಿಂದ ಎಲ್ಲರನ್ನೂ ಉಜ್ಜೀವಿಸುವಂತೆ ಉಪದೇಶಿಸಿರುತ್ತಾರೆ. ಭಾಗವತ ನಿಷ್ಠೆಯು ಅಷ್ಟಾಕ್ಷರ ಬ್ರಹ್ಮವಿದ್ಯೆಯ ಅಂತ್ಯವಾವಧಿಯನ್ನು ಸೂಚಿಸುತ್ತದೆ. ಈ ವಿಷಯದಲ್ಲಿ "ನಿನ್‌ತಿರುವೆಟ್ಟೆಳುತ್ತು ಕಟ್ರು ನಾನುಟ್ರ್ರದುನ್ನಡಿಯಾರ್ಕಡಿಮೈ" (ತಿ, ಮೊಳಿ. 8-10-3) ಎಂದು ತಿರುಮಂಗೈಯಾಳ್ವಾರ್ರು ಹಾಡಿರುವರು. ಇದೇರೀತಿಯಲ್ಲಿ "ಶ್ರೀಮಧುರಕವಿಯಾಳ್ವಾರ್ರೂ ಮತ್ತು ಶ್ರೀರಾಮಾನುಜಾಚಾರ್ಯರ ಶಿಷ್ಯರಾದ "ತಿರುವರಂಗತ್ತಮುಧನಾರ್" ರವರುಗಳು ತಮ್ಮ ತಮ್ಮ ಆಚಾರ್ಯರುಗಳಾಳ ಶ್ರೀ ನಮ್ಮಾಳ್ವಾರ್ ಮತ್ತು ಭಗವದ್ರಾಮಾನುಜಾಚಾರರ್ಯ ಸ್ತುತಿರೂಪವಾಗಿ "ಕಣ್ಣಿನುಣ್ ಶಿರುತ್ತಾಂಬು" ಮತ್ತು "ಇರಾಮಾನುಶನೂಟ್ರ್ರದಾದಿ" ಗಳನ್ನು ಹಾಡಿ, ತಮ್ಮಂತೆಯೇ ಮುಂದೆಯೂ ಜನರು ಸ್ವಾಚಾರ್ಯನಿಷ್ಠರಾಗಿ ತತ್ಸಮಕಾಲದ ಭಾಗವತ ಕೈಂಕರ್ಯದಲ್ಲಿ ನಿರತರಾಗಿದ್ದು ಉಜ್ಜೀವಿಸಲೆಂದು ಆಶಿಸಿರುವರು. ಈ ಭಾಗವತ ನಿಷ್ಠೆಯು ಅಷ್ಟಾಕ್ಷರಿ ಮಂತ್ರದ ಮಧ್ಯಮ ಪದಾರ್ಥನಿಷ್ಠೆಯಾಗಿರುತ್ತದೆ. "ನೂಟ್ರ್ರಂದಾರಿ" ಯ ಪ್ರವೇಶದಲ್ಲಿ "ಸಕಲ ಶಾಸ್ತ್ರಾರ್ಥ ಸಂಗ್ರಹಮಾನ ತಿರುಮಂತ್ರತ್ತಿನುಡೈಯ ತಾತ್ಪರ್ಯಂ" ಎಂದು ಆರಂಭಿಸಿ "ಆಳ್ವಾರ್ ತಮ್ಮಾಲೇನಾಧ ಮುನಿಕಳಕ್ಕು ಅರುಳಿಚ್ಚೈಯಪಟ್ಟದು. ಇಪ್ಪಡಿ ಪರಂಪರಾಪ್ರಾಪ್ತಂ" ಎಂದು ಈ ಪದ್ಯಮ ಪದದ ಭಾಗವತ ನಿಷ್ಠೆಯನ್ನು ನಮ್ಮ ಪೂರ್ವಾಚಾರ್ಯರುಗಳು ಉಪದೇಶಿಸಿರುವರು.

ಕೂರತ್ತಾಳ್ವಾರ್ರು ತಮ್ಮ ಮರಣದೆಸೆಯಲ್ಲಿ ತಮ್ಮ ಮಕ್ಕಳಾದ ಭಟ್ಟರ್ ಮತ್ತು ಶ್ರೀರಾಮಪಿಳ್ಳೈಗಳನ್ನು ಹತ್ತಿರಕ್ಕೆ ಕರೆದು "ನೀವು ಶ್ರೀರಂಗನಾಥನಿಂದ ಪುತ್ರಸ್ವೀಕಾರ ಮಾಡಲ್ಪಟ್ಟು ಭಗವಂತನ ವಿಶೇಷ ಕಟಾಕ್ಷಕ್ಕೆ ಪಾತ್ರರಾಗಿರುವಿರೆಂಬ ಅಹಂಕಾರವನ್ನು ತ್ಯಜಿಸಿ ಶ್ರೀಮದ್ರಾಮಾನುಜಾಚಾರ್ಯರ ಪಾದಕಮಲಗಳಲ್ಲಿ ಮಾಡುವ ಪ್ರಪತ್ತಿಯೇ ನಿಮಗೆ ಮೋಕ್ಷಹೇತು ವಾಗುವುದೆಂಬುದನ್ನು ಸರ್ವಥಾ ಮರೆಯಬೇಡಿ" ಎಂದು ಉಪದೇಶಿಸಿದರು

"ಕಣಿಯನೂರ್–ಶಿರಿಯಾಚ್ಚಾನ್" ಎಂಬ ರಾಮಾನುಜಾಚಾರ್ಯರ ಶಿಷ್ಯರು ಸಚೇಲ ಸ್ನಾನಪೂರ್ವಕವಾಗಿ ಶ್ರೀವೈಷ್ಣವ ಸಭೆಯೊಂದರಲ್ಲಿ ನಿಂತು

ಸತ್ಯಂಸತ್ಯಂ ಪುನಸ್ಸತ್ಯಂ । ಯತಿರಾಜೋ ಜಗದ್ಗುರುಃ ॥
ಸಏವ ಸರ್ವಲೋಕಾನಾಂ । ಉದ್ಧರ್ತಾ ನಾತ್ರಸಂಶಯಃ ॥

ಎಂದು ಹೇಳಿದರು

'ವಡುಗನಂಬಿ' ಎಂಬ ಶ್ರೀರಾಮಾನುಜಾಚಾರ್ಯರ ಮುಖ್ಯ ಶಿಷ್ಯರಲ್ಲೊಬ್ಬರು ಈ ರೀತಿಯಾಗಿ ಎಲ್ಲರಿಗೂ ಉಪದೇಶ ಮಾಡಿದರು—"ಆಚಾರ್ಯಪದಮೆನ್ರು ತನಿಯೇ ಒರು ಪದಮುಂಡು ; ಅದು ಉಳ್ಳದು ಎಂಬೆರುಮಾನಾರುಕ್ಕೇ. ಆಕೈಯಾಲೇ ಎಲ್ಲೋರ್ಕ್ಕುಂ ಎಂಬೆರು ಮಾನಾರ್ ತಿರುವಡಿಕಳೊಳಿಯ ವೇರೊದು ಉಪಾಯಮಿಲ್ಲೈ. ಅವರ್ ತಿರುವಡಿಕಳೇ ತಂಜಮೆನ್ರಿರುಂಗೋಳ್" ಎಂದು ಹೇಳಿದರು.

ಈ ಪ್ರಕಾರವಾಗಿ ಭಗವದಾಚಾರ್ಯಾವತಾರರಾದ ಶ್ರೀಮದ್ರಾಮಾನುಜಾಚಾರ್ಯರೇ ಸದಾಚಾರ್ಯ ನಿಷ್ಠರಾದ ಶ್ರೀವೈಷ್ಣವರಿಗೆಲ್ಲಾ ಆಚಾರ್ಯರಾಗಿರುವರು. ಇದನ್ನು ಶ್ರೀವೈಷ್ಣವ ಸದಾಚಾರ್ಯನಿಷ್ಟರೆಲ್ಲರೂ ನಿಸ್ಸಂದೇಹವಾಗಿ ತಿಳಿಯತಕ್ಕದ್ದು.

ಹಿಂದೆ ಹೇಳಿದ ಶ್ರೀಸೂಕ್ತಿಯಲ್ಲಿ "ಗುರುರೂಪಿಣಃ ತ್ರಿದಂಡಿನಃ" ಎಂಬ ಬಹುವಚನವು ಗುರುಪದದ ಬಹುವಚನವಾಗಿರುವುದರಿಂದ ಭಗವದ್ರಾಮಾನುಜಾಚಾರ್ಯರ ಶಿಷ್ಯಪರಂಪರಾಪ್ರಾಪ್ತವಾದ ಆಚಾರ್ಯರುಗಳಿಗೆಲ್ಲಾ ಅನ್ವಯಿಸಿ, ಹಿಂದೆಯೇ ವಿಶದವಾಗಿ ಹೇಳಿದಂತೆ ಶ್ರೀಮದ್ರಾಮಾನುಜಾಚಾರ್ಯರ ಅಪರಾವತಾರರಾಗಿ "ಯತೀಂದ್ರಪ್ರವಣ" ರೆಂದು ಪ್ರಖ್ಯಾತರಾದ ಶ್ರೀ ಮಣವಾಳಮಾಮುನಿಗಳ ಪರ್ಯಂತವಾಗಿ ಅನ್ವಯಿಸುವುದು ನಮ್ಮ ಆಚಾರ್ಯ ಪರಂಪರೆಯಲ್ಲಿ ವಾಡಿಕೆಯಾಗಿದೆ. ಇದೇ ರೀತಿಯಲ್ಲಿ ಶ್ರೀವೈಷ್ಣವ ವಡಕಲೈ ಸಂಪ್ರದಾಯದಲ್ಲಿ ಭಗವದ್ರಾಮಾನುಜಾಚಾರ್ಯರ ಅನಂತರದಲ್ಲಿ ಶ್ರೀಮನ್ನಿಗಮಾನ್ತದೇಶಿಕರ ಪರ್ಯನ್ತವಾಗಿ ಪರಂಪರಾಪ್ರಾಪ್ತವಾಗಿರುವುದು.

ಯೋನಿತ್ಯಮಚ್ಯುತ ಪದಾಂಬುಜಯುಗ್ಮರುಕ್ಮ ।
ವ್ಯಾಮೋಹತಸ್ತದಿತ ರಾಣಿತೃಣಾಯಮೇನೇ ॥
ಅಸ್ಮದ್ಗುರೋರ್ಭಗವತೋಽಸ್ಯದಯೈಕಸಿಂಧೋಃ ।
ರಾಮಾನುಜಸ್ಯ ಚರಣೌ ಶರಣಂಪ್ರಪದ್ಯೇ ॥